# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:04-08-2026 ರಂದು ಮಂಗಳವಾರ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 405ನೇ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಹೇಮಂತ್ ಎನ್. ಐ.ಎ.ಎಸ್. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಕೇಶವ ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಪ್ರೊ. ಚಂದ್ರಶೇಖರ್ ಎಸ್., ಡೀನರು, ಕಲಾ ನಿಕಾಯ | ಸದಸ್ಯರು |
| 6. | ಡಾ. ಪಿ ಕೆ. ಬಸವರಾಜ. | ಸದಸ್ಯರು |
| 7. | ಶ್ರೀ ಶಿವಕುಮಾರ್ ಡಿ.ಎಸ್. | ಸದಸ್ಯರು |
| 8. | ಡಾ. ಚಿದಾನಂದ ಎನ್.ಕೆ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಪ್ರತಿಭಾ ಕೆ.ಆರ್. ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಬಿ.ಜಿ. ಚನ್ನಪ್ಪ. ಪ್ರಾಂಶುಪಾಲರು | ಸದಸ್ಯರು |
| 12. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 13. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 14. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 15. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 16. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |
| 17. | ಶ್ರೀ ಶ್ರೀಕಾಂತ್ ಕೆ.ಎಸ್. | ವಿಶೇಷ ಆಹ್ವಾನಿತರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ 28(1)(ಇ) ಅನ್ವಯ ಕುಲಾಧಿಪತಿಗಳಿಂದ ಮೂರು ವರ್ಷಗಳ ಅವಧಿಗೆ ಸಿಂಡಿಕೇಟ್ ಸದಸ್ಯರಾಗಿ ನೂತನವಾಗಿ ನಾಮನಿರ್ದೇಶನಗೊಂಡ ಪ್ರೊ.ಪಿ.ಕೆ.ಬಸವರಾಜ ಮತ್ತು ಶ್ರೀ ಶಿವಕುಮಾರ್.ಡಿ.ಎಸ್ ಇವರುಗಳನ್ನು ಹಾಗೂ ಪ್ರಾಂಶುಪಾಲರ ಕೋಟಾದಲ್ಲಿ ಸಿಂಡಿಕೇಟ್ ಸದಸ್ಯರಾಗಿ ನೇಮಕ ಹೊಂದಿದ ಡಾ.ಬಿ.ಜಿ.ಚನ್ನಪ್ಪ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿಕಾರಿಪುರ ಇವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯತ್ವ ಅವಧಿ ಮುಗಿದ ಶ್ರೀ ಶಾಂತಕುಮಾರ್ ಜಿ.ಎಸ್. ಮತ್ತು ಶ್ರೀ ಶಶಿಧರ್ ಬಿ.ಎನ್. ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 28(1)(ಎಫ್) ಅನ್ವಯ ಪ್ರಾಂಶುಪಾಲರ ಕೋಟಾದಲ್ಲಿ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿ ದಿನಾಂಕ:31-07-2026 ರಂದು ವಯೋನಿವೃತ್ತಿ ಹೊಂದಿರುವ ಡಾ.ವೆಂಕಟೇಶ್ ಎಂ. ಇವರುಗಳು ನೀಡಿದ ಸಲಹೆ ಮತ್ತು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಹಕಾರಗಳನ್ನು ಸ್ಮರಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅವರುಗಳನ್ನು ಎಲ್ಲಾ ಸದಸ್ಯರುಗಳು ಅಭಿನಂದಿಸಿದರು.

ಮಾನ್ಯ ಕುಲಪತಿಗಳು ಕಾರ್ಯಸೂಚಿಯ ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಹರಡುತ್ತಿರುವ ಹಂದಿಗೋಡು ಕಾಯಿಲೆಗೆ ಸಂಬಂಧಿಸಿದಂತೆ ಇದರ ಬಗ್ಗೆ ಸುಧೀರ್ಘವಾಗಿ ಅಧ್ಯಯನ ಮಾಡಿರುವ ಶ್ರೀಯುತ ಕೃಷ್ಣಮೂರ್ತಿ, ಡಾ.ಚಂದ್ರಶೇಖರ್ ಮತ್ತು ಡಾ.ಬಾಲು ಇವರುಗಳು ಸಭೆಗೆ ಹಾಜರಾಗಿ ಈ ವಿಷಯದ ಕುರಿತು ಅಧ್ಯಯನ ಮಾಡಿ, ತಯಾರಿಸಿರುವ ದಾಖಲೆಗಳನ್ನು (Documentary) ಸಿದ್ಧಪಡಿಸಿದ್ದು ಅದನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವುದಾಗಿ ತಿಳಿಸಿದರು. ಅವರುಗಳನ್ನು ಸಭೆಗೆ ಪರಿಚಯಿಸಿ ಇದರ ಕುರಿತು ಸಂಕ್ಷಿಪ್ತವಾಗಿ ವಿವರಿಸುವಂತೆ ತಿಳಿಸಿದರು. ಹಂದಿಗೋಡು ಎಂಬ ಮಾರಕ ಕಾಯಿಲೆಯು ಮಲೆನಾಡು ಭಾಗವಾದ ಶಿವಮೊಗ್ಗ ಮತ್ತು ಚಿಕ್ಕಮಗಳೂರಿನ ಕೆಲವು ಪ್ರದೇಶಗಳಲ್ಲಿ ಹಲವಾರು ವರ್ಷಗಳಿಂದ ಸಮಾಜದಲ್ಲಿ ಅತೀ ಹಿಂದುಳಿದ ಮತ್ತು ತೀರಾ ಕಡುಬಡತನದಲ್ಲಿರುವ ಜನಾಂಗದಲ್ಲಿ ಕಾಣಿಸಿಕೊಂಡಿದ್ದು, ಇದರಿಂದ ಅವರುಗಳು ಅನುಭವಿಸುತ್ತಿರುವ ನೋವುಗಳನ್ನು ಸಭೆಗೆ ವಿವರಿಸಿದರು ಹಾಗೂ ಹಂದಿಗೋಡು ಕಾಯಿಲೆ ಇರುವ ಪ್ರದೇಶಗಳಿಗೆ ಭೇಟಿ ನೀಡಿ ಈ ಕಾಯಿಲೆಯಿಂದ ಜನಗಳು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ಹಾಗೂ ಇದರಿಂದ ಆ ಪ್ರದೇಶದ ಅನೇಕ ಹೆಣ್ಣು ಮಕ್ಕಳನ್ನು ವಿವಾಹವಾಗಲು ಸಹ ಯಾರೂ ಮುಂದೆ ಬರದೇ ಇರುವುದನ್ನು ವಿವರಿಸಿದರು. ಇದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಒಂದು Documentary ತಯಾರಿಸಿದ್ದು ಇದನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವುದಾಗಿ ತಿಳಿಸಿ ಇದನ್ನು ವಿಶ್ವವಿದ್ಯಾಲಯವು ಸೂಕ್ತ ರೀತಿಯಲ್ಲಿ ಬಳಕೆ ಮಾಡಿಕೊಂಡು ಇದರ ಮೇಲೆ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿದರು. ಕುಲಸಚಿವರು ಮಾತನಾಡಿ ಇದನ್ನು ಪರಿಶೀಲಿಸಿ ಮೊದಲು ಇದನು Digitalization ಮಾಡಿ Print Format ರೂಪಕ್ಕೆ ತಂದು ನಂತರ ಒಂದು ನುರಿತ ತಜ್ಞರ ತಂಡವನ್ನು ರಚಿಸಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿ ಕಾರ್ಯಗತಗೊಳಿಸುವುದಾಗಿ ತಿಳಿಸಿದರು. ನಂತರ ಈ ಒಂದು ಹಂದಿಗೋಡು ಕಾಯಿಲೆ ಬಗ್ಗೆ ಇಷ್ಟೊಂದು ಅಧ್ಯಯನ ಮಾಡಿ ದಾಖಲೆಗಳನ್ನು ಸಿದ್ಧಪಡಿಸಿರುವ ತಮಗೆಲ್ಲರಿಗೂ ವಿಶ್ವವಿದ್ಯಾಲಯ ಮತ್ತು ಸಿಂಡಿಕೇಟ್‌ನ ಪರವಾಗಿ ಅಭಿನಂದಿಸುವುದಾಗಿ ತಿಳಿಸಿದರು. ಮಾನ್ಯ ಕುಲಪತಿಗಳೂ ಸಹ ಈ ಮೂರೂ ಜನರನ್ನು ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದರು.

ನಂತರ ಕಾರ್ಯಸೂಚಿಯ ಪ್ರಕಾರ ವಿಷಯವನ್ನು ಚರ್ಚೆಗೆ ಕೈಗೆತ್ತಿಗೊಳ್ಳಲಾಯಿತು. ಸದಸ್ಯರಾದ ಪ್ರೊ.ಸಾಕಮ್ಮ ಬಿ. ಇವರು ಹಿಂದಿನ ಸಭೆಯ ನಡಾವಳಿಯನ್ನು ವಿಳಂಬವಾಗಿ ಕಳುಹಿಸಿರುವ ಬಗ್ಗೆ ಹಾಗೂ ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ಇವರು ಸಿಂಡಿಕೇಟ್ ಸಭೆಯ ಕಾರ್ಯಸೂಚಿಯನ್ನು ಮುಂಚಿತವಾಗಿ ಕಳುಹಿಸಿದಲ್ಲಿ ಅನುಕೂಲವಾಗುವುದು ಎಂದರು ಹಾಗೂ ಹಿಂದಿನ ಸಭೆಯಲ್ಲಿ ತಾವು ಪ್ರಸ್ತಾಪಿಸಿರುವ ಹೊರಗುತ್ತಿಗೆ ಸಿಬ್ಬಂದಿಗಳ ಕಡಿತದ ವಿಷಯವನ್ನು ಸರಿಯಾದ ರೀತಿಯಲ್ಲಿ ದಾಖಲಾಗದೇ ಇರುವುದನ್ನು ಆಕ್ಷೇಪಿಸಿ ಕುಲಸಚಿವರ ಗಮನಕ್ಕೆ ತಂದರು. ಮಾನ್ಯ ಕುಲಸಚಿವರು ಮಾತನಾಡಿ ಈ ರೀತಿಯಾಗಿ ಮುಂದೆ ಆಗದಂತೆ ಕ್ರಮವಹಿಸಲಾಗುವುದು ಹಾಗೂ ಸರಿಪಡಿಸಲಾಗುವುದೆಂದು ಹೇಳಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ



Scanned with OKEN Scanner

ಸದಸ್ಯರಾದ ಶ್ರೀ ಶ್ರೀಪಾಲ್ ರವರು ಸಹ ತಾವು ಹಿಂದಿನ ಕುಲಸಚಿವರ ಕುರಿತು ಹೇಳಿರುವ ಅಂಶವನ್ನು ತಪ್ಪಾಗಿ ದಾಖಲಿಸಲಾಗಿದೆ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ತಪ್ಪಾಗಿ ದಾಖಲಾಗಿರುವುದನ್ನು ಸರಿಪಡಿಸಲಾಗುವುದೆಂದರು ಹಾಗೂ ವಿಶ್ವವಿದ್ಯಾಲಯದ ನಿಯಮಗಳ ಪ್ರಕಾರ ಇಂತಿಷ್ಟೇ ದಿನದಲ್ಲಿ ಕಾರ್ಯಸೂಚಿಯನ್ನು ಕಳುಹಿಸಬೇಕೆಂಬ ನಿಯಮವಿದ್ದು ಅದರಂತೆ ಕಾರ್ಯಸೂಚಿಯನ್ನು ಕಳುಹಿಸಲಾಗಿದ್ದು, ಮುಂಬರುವ ಸಭೆಗಳ ಕಾರ್ಯಸೂಚಿಯನ್ನು ಸಭೆಯು ನಡೆಯುವ 2–3 ದಿನಗಳ ಮೊದಲು ತಲುಪುವಂತೆ ಕ್ರಮವಹಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದರು. ಕೆಲವೊಮ್ಮೆ ತುರ್ತು ಸಂದರ್ಭಗಳಲ್ಲಿ ವಿಷಯ ಮಂಡಿಸಬೇಕಾದ ಸಂದರ್ಭದಲ್ಲಿ ಹೆಚ್ಚುವರಿ ಕಾರ್ಯಸೂಚಿಯನ್ನು ಮಂಡಿಸಬೇಕಾಗಿರುತ್ತದೆ ಹಾಗೂ ಹಿಂದಿನ ಸಭೆಯ ನಡಾವಳಿಯನ್ನು ಸದಸ್ಯರುಗಳಿಗೆ ಕಳುಹಿಸಲಾಗಿದ್ದು ನಡಾವಳಿಯ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಅದನ್ನು ಲಿಖಿತವಾಗಿ ಸಲ್ಲಿಸಿದಲ್ಲಿ ಅದನ್ನು ನಿಯಮಗಳಡಿಯಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

## ಪ್ರಾಧಿಕಾರಗಳ ವಿಭಾಗ

**2026–ಸಿಂ–5.01:** ದಿನಾಂಕ:09–01–2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ದಿನಾಂಕ:09–01–2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯನ್ನು ನಿಯಮಾನುಸಾರ ಸಿಂಡಿಕೇಟ್ ಧೃಡೀಕರಿಸಬೇಕಾಗಿರುವುದರಿಂದ ನಡಾವಳಿಯನ್ನು ಧೃಡೀಕರಣಕ್ಕಾಗಿ ಮಂಡಿಸಿದೆ ಎಂದರು.

**ನಿರ್ಣಯ:** ದಿನಾಂಕ:09–01–2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸಿ ಧೃಡೀಕರಿಸಲಾಯಿತು.

**2026–ಸಿಂ–5.02:** ದಿನಾಂಕ:09–01–2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ದಿನಾಂಕ:09–01–2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

**2026–ಸಿಂ–5.03:** ದಿನಾಂಕ:02–05–2026 ರಂದು ನಡೆದಿರುವ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ದೃಢೀಕರಣ ಕುರಿತು.

**ನಿರ್ಣಯ:** ದಿನಾಂಕ:02–05–2026 ರಂದು ನಡೆದಿರುವ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಅನುಮೋದಿಸಿ ಧೃಡೀಕರಿಸಲಾಯಿತು.

**2026–ಸಿಂ–5.04:** ದಿನಾಂಕ:02–05–2026 ರಂದು ನಡೆದಿರುವ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ದಿನಾಂಕ:02–05–2026 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

**2026–ಸಿಂ–5.04(ಎ):** ದಿನಾಂಕ:25–03–2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ದಿನಾಂಕ:25–03–2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯನ್ನು ಈಗಾಗಲೇ ತಮಗೆ ಕಳುಹಿಸಿಕೊಡಲಾಗಿದ್ದು ಇದರಲ್ಲಿ ಏನಾದರೂ ತಿದ್ದುಪಡಿ ಇದ್ದಲ್ಲಿ ತಿಳಿಸುವಂತೆ ಸೂಚಿಸಲಾಗಿತ್ತು. ಆದರೆ ಯಾವುದೇ ಆಕ್ಷೇಪಣೆ ಅಥವಾ ತಿದ್ದುಪಡಿ ಸ್ವೀಕೃತವಾಗದೇ ಇರುವುದರಿಂದ ಇದನ್ನು ದೃಢೀಕರಣಕ್ಕಾಗಿ ಮಂಡಿಸಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ನಿರ್ಣಯ: ದಿನಾಂಕ:25-03-2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸಿ ಧೃಡೀಕರಿಸಲಾಯಿತು.

2026-ಸಿಂ-5.04(ಬಿ): ದಿನಾಂಕ:25-03-2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ದಿನಾಂಕ:25-03-2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸದಸ್ಯರುಗಳು ಪರಾಮರ್ಶಿಸಿ ಏನಾದರೂ ಸಲಹೆ ಸೂಚನೆಗಳನ್ನು ಲಿಖಿತವಾಗಿ ಸಲ್ಲಿಸಿದಲ್ಲಿ ಅದರಂತೆ ಪರಿಶೀಲಿಸಿ ದಾಖಲಿಸಿಕೊಳ್ಳಲಾಗುವುದೆಂದರು.

ನಿರ್ಣಯ: ದಿನಾಂಕ:25-03-2026 ರಂದು ನಡೆದಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

## ಸಂಶೋಧನೆ ಮತ್ತು ಅಭಿವೃದ್ಧಿ ಘಟಕ

2026-ಸಿಂ-5.05: ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ಮತ್ತು ನಗರ ವಿಶ್ವವಿದ್ಯಾಲಯ ಆಜ್ಮಾನ್ (UAE) ಮತ್ತು ವಿಶ್ವವಿದ್ಯಾಲಯದ ಎಂ.ಸಿ.ಎ. ವಿಭಾಗಗಳ ಮಧ್ಯೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

ಚರ್ಚೆ: ಈ ವಿಷಯದ ಕುರಿತು ಎಂ.ಸಿ.ಎ ಮತ್ತು ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ.ಸುರೇಶ್ ಎಂ. ಇವರನ್ನು ಸಭೆಗೆ ಕರೆಸಿ ಈ ಒಡಂಬಡಿಕೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವಂತೆ ತಿಳಿಸಲಾಯಿತು. ಡಾ.ಸುರೇಶ್ ರವರು ಮಾತನಾಡಿ ಆಧಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ಮತ್ತು ನಗರ ವಿಶ್ವವಿದ್ಯಾಲಯ ಆಜ್ಮಾನ್ (UAE) ಮತ್ತು ಕುವೆಂಪು ವಿಶ್ವವಿದ್ಯಾಲಯದ ಗಣಕ ವಿಜ್ಞಾನ ವಿಭಾಗಗಳ ನಡುವೆ ಶೈಕ್ಷಣಿಕ ಮತ್ತು ಸಂಶೋಧನೆ ಹಾಗೂ ತರಬೇತಿ/ಕೌಶಲ್ಯಾಭಿವೃದ್ಧಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಒಡಂಡಿಕೆ ಮಾಡಿಕೊಳ್ಳಬೇಕಾಗಿದೆ ಎಂದರು. ಕುಲಸಚಿವರು ಮಾತನಾಡಿ ಈ ಒಡಂಬಡಿಕೆ ಮತ್ತು ಯೋಜನೆಯ ಉದ್ದೇಶವೇನು ಎಂಬುದರ ಬಗ್ಗೆ ವಿವರ ಕೇಳಿದರು.

ಡಾ.ಸುರೇಶರವರು ಈ ಬಗ್ಗೆ ವಿವರಿಸುತ್ತಾ, ಅವರು ನಮ್ಮ ವಿಶ್ವವಿದ್ಯಾಲಯ ಮತ್ತು ಆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು/ಸಂಶೋಧನಾರ್ಥಿಗಳು ಮತ್ತು ಅಧ್ಯಾಪಕ ವರ್ಗದವರಿಗೆ ಶೈಕ್ಷಣಿಕ ಮತ್ತು ಸಂಶೋಧನೆಯ ಕುರಿತು ತರಬೇತಿ ನೀಡುವುದು ಈ ಒಡಂಬಡಿಕೆಯ ಉದ್ದೇಶವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯದಿಂದ ಎರಡು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು ಅದರಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಸ್ತಾವನೆ ಮಾತ್ರ ಅನುಮೋದನೆಯಾಗಿದೆ ಎಂದರು. ಸದಸ್ಯರಾದ ಶ್ರೀ ಶ್ರೀಪಾಲ್‌ರವರು ವಿಶ್ವವಿದ್ಯಾಲಯಕ್ಕೆ ಈ ಒಡಂಬಡಿಕೆಯಿಂದ ಯಾವುದಾದರೂ ಹಣಕಾಸು ಹೊರೆಯಾಗುವುದೇ ಎಂದರು. ಇದಕ್ಕೆ ಉತ್ತರಿಸಿದ ಡಾ.ಎಂ.ಸುರೇಶ್ ಐಟಿ;ಬಿಟಿ ಇಲಾಖೆಯಿಂದ 1.25 ಕೋಟಿ (ರೂಪಾಯಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಮಾತ್ರ) ಅನುದಾನ ಮಂಜೂರಾಗಿದ್ದು ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವೆಂದರು ಹಾಗೂ ಇದಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯಿದ್ದು ಅದರಲ್ಲಿ ತಮ್ಮ ವಿಭಾಗದ ಅಧ್ಯಾಪಕರು ಸದಸ್ಯರಾಗಿರುತ್ತಾರೆ ಎಂದರು. ಪ್ರೊ. ಬಸವರಾಜ್ ಇವರು ಮಾತನಾಡಿ ಸಮಿತಿಯಲ್ಲಿ ಒಂದೇ ವಿಭಾಗದ ತಜ್ಞರ ಬದಲಿಗೆ ಬೇರೆ ಬೇರೆ ವಿಭಾಗದವರು ಇರುವುದು ಸೂಕ್ತವೆಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಮಾನ್ಯ ಕುಲಪತಿಯವರು ಮಾತನಾಡುತ್ತಾ, ಸಮಿತಿಯಲ್ಲಿ ಡಾ.ಸುರೇಶ್, ಡಾ.ಯೋಗೀಶ್ ಹಾಗೂ ಎಂ.ಸಿ.ಎ. ವಿಭಾಗದ ಇತರರು ಇದ್ದು, ಎಲೆಕ್ಟ್ರಾನಿಕ್ಸ್ ಹಾಗೂ ಎಂ.ಸಿ.ಎ ವಿಭಾಗದವರನ್ನು ಸೇರಿಸಿ ಸಮಿತಿ ರಚನೆ ಮಾಡುವುದು ಸೂಕ್ತವಾಗಿರುತ್ತದೆ ಎಂದರು. Robotics ವಿಷಯಕ್ಕೆ ಹೆಚ್ಚಿನ ಒತ್ತು ನೀಡುವುದು ಸೂಕ್ತವೆಂದು ಹೇಳುತ್ತಾ, ಸಮಿತಿಯನ್ನು ಪುನರ್‌ರಚನೆ ಮಾಡಲು ತಿಳಿಸಿದರು. ಸಮಿತಿಗೆ P.E.S.I.T., J.N.N.C.E ಮತ್ತು ಸಹ್ಯಾದ್ರಿ ಕಾಲೇಜಿನ ಸ್ನಾತಕ ಅಧ್ಯಾಪಕರನ್ನು ಸೇರಿಸಲು ಕುಲಸಚಿವರು ತಿಳಿಸಿದರು. ಇದಕ್ಕೆ ಸಂಬಂಧಿಸಿದ ಪ್ರಯಾಣ ಹಾಗೂ ದಿನಭತ್ಯೆಯನ್ನು ಪರಿನಿಯಮ ಹಾಗೂ ಸರ್ಕಾರದ ನಿಯಮಾನುಸಾರ ಪಾವತಿಸುವಂತೆ ತಿಳಿಸಿದರು.

ನಿರ್ಣಯ: ಚರ್ಚೆಯ ನಂತರ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ಮತ್ತು ನಗರ ವಿಶ್ವವಿದ್ಯಾಲಯ ಅಜ್ಮಾನ್ (UAE) ಮತ್ತು ವಿಶ್ವವಿದ್ಯಾಲಯದ ಎಂ.ಸಿ.ಎ. ವಿಭಾಗಗಳ ಮಧ್ಯೆ Collaborative research and joint publications, Exchange of Knowledge, expertise, and best practices, Student training, internships and project work, field training and placements for students, Knowledge transfer, capacity building and skill enhancement programs, Joint organization of academic and professional events, Faculty development, training programs, and expert lectures. ಮುಂತಾದ ಶೈಕ್ಷಣಿಕ ಮತ್ತು ಸಂಶೋಧನೆ ಹಾಗೂ ತರಬೇತಿ/ಕೌಶಲ್ಯಾಭಿವೃದ್ಧಿ ಸೇರಿದಂತೆ ವಿವಿದ ವಿಷಯಗಳ ಕುರಿತು ಒಡಂಬಡಿಕೆ ಮಾಡಿಕೊಳ್ಳಲು ನಿರ್ಣಯಿಸಲಾಯಿತು ಹಾಗೂ ಮೇಲ್ಕಂಡ ಚರ್ಚೆಯಲ್ಲಿ ನಿರ್ಣಯಿಸಿರುವಂತೆ ಸಮಿತಿಯನ್ನು ಪುನರ್ ರಚಿಸಲು ಹಾಗೂ ನಿಯಮಾನುಸಾರ ಭತ್ಯೆಗಳನ್ನು ಪಾವತಿಸಲು ಕ್ರಮ ವಹಿಸಲು ನಿರ್ಣಯಿಸಲಾಯಿತು.

**2026–ಸಿಂ–5.06:** Fire & Safety ಕೋರ್ಸ್‌ನ್ನು ನಡೆಸಲು Malnad Institute of Skill Development and Training Centre, Shivamogga MoU ಮಾಡಿಕೊಳ್ಳುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ನೀಡುತ್ತಿರುವ ಇಂದಿನ ಸಾಂಪ್ರದಾಯಿಕ ಪದವಿಗಳಿಂದ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಪಡೆಯುವುದು ಕಷ್ಟವಾಗುತ್ತಿದೆ. ಆದುದರಿಂದ, ಪದವಿಯ ಜೊತೆಗೆ ಅಗತ್ಯವಿರುವ ಕೆಲವು ಕೌಶಲ್ಯಗಳ ಬಗ್ಗೆ ಕೂಡ ತರಬೇತಿ ನೀಡಬೇಕಾಗುತ್ತದೆ. ಇದರಿಂದ, ಅವರು ಉದ್ಯೋಗ ಪಡೆಯಲು ಹಾಗೂ ಸ್ವ–ಉದ್ಯೋಗಿಗಳಾಗಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ, ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಕೋರ್ಸ್‌ಗಳ ಮೂಲಕ ತರಬೇತಿ ನೀಡಲು Malnad Institute of Skill Development and Training Centre, Shivamogga ಇವರು Fire & Safety ಕೋರ್ಸ್‌ನ್ನು ನಡೆಸಲು ಕುವೆಂಪು ವಿಶ್ವವಿದ್ಯಾಲಯದ ಮಾನ್ಯತೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಕೋರ್ಸ್ ಅಧ್ಯಯನ ಮಾಡುವವರಿಗೆ Digital Literacy (Computer and IT skills) and Communication Skills ತರಬೇತಿ ಕೋರ್ಸ್‌ಗಳನ್ನು ಉಚಿತವಾಗಿ ನೀಡುವುದಾಗಿ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ರೆಗ್ಯುಲರ್, ವಾರಾಂತ್ಯದಲ್ಲಿ ಅಥವಾ ರಜಾದಿನಗಳಲ್ಲಿ ಪ್ರತ್ಯೇಕವಾದ ತಂಡಗಳ (Batch) ಮೂಲಕ ತರಗತಿಗಳನ್ನು ನಡೆಸಲಾಗುವುದು ಎಂದು ದಿನಾಂಕ:15–07–2026 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದರಿ ಸಂಸ್ಥೆಯವರು ತಿಳಿಸಿರುತ್ತಾರೆ. ಆದುದರಿಂದ, Fire & Safetyಯ ಕೋರ್ಸ್‌ಗೆ ಒಂದು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ವರ್ಷದ ಡಿಪ್ಲೋಮಾ ಮತ್ತು ಆರು ತಿಂಗಳ ಸರ್ಟಿಫಿಕೇಟ್ ಕೋರ್ಸ್‌ಗೆ ರೆಗ್ಯೂಲೇಷನ್ ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರಗಳಾದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆ ನಂತರ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಇವರು ಮಾತನಾಡುತ್ತಾ, ಸದರಿ ಸಂಸ್ಥೆಯು ವೃತ್ತಿಪರ ಕೋರ್ಸ್ ಬಗ್ಗೆ ತರಬೇತಿ ನೀಡುತ್ತಿದ್ದು ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಂಡರೆ ನಮ್ಮ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ಎಂದರು.

ಮಾನ್ಯ ಕುಲಸಚಿವರು ಮಾತನಾಡುತ್ತಾ, ಸದರಿ ಸಂಸ್ಥೆಯವರು ಕುವೆಂಪು ವಿಶ್ವವಿದ್ಯಾಲಯದಿಂದ ಸಂಯೋಜನೆ ಕೇಳುತ್ತಾ ಇದ್ದು, Skill Development ಬಗ್ಗೆ ಸರ್ಟಿಫಿಕೇಟ್ ಕೋರ್ಸ್‌ಗೆ ಮಾನ್ಯತೆ ಇರಬೇಕಾದರೆ ಸಂಯೋಜನೆ (ಅಫಿಲಿಯೇಷನ್) ನೀಡಬೇಕು ರೆಗ್ಯೂಲೇಷನ್ ಸಿದ್ಧಪಡಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದ ನಂತರ ಆರು ತಿಂಗಳ ಕೋರ್ಸ್ ಮಾಡಬೇಕಾಗಿದ್ದು, ಸಂಬಂಧಿಸಿದ ಪಠ್ಯಕ್ರಮ ರಚನೆ ಮಾಡಬೇಕಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, ಸದರಿ ಸಂಸ್ಥೆಯವರು ವಿಶ್ವವಿದ್ಯಾಲಯಕ್ಕೆ ಬಂದು ಪರಿನಿಯಮ ರಚನಾ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಪ್ರಸ್ತುತ ಪಡಿಸಿರುತ್ತಾರೆ. ಪರಿನಿಯಮ ರಚನಾ ಸಮಿತಿಯ ಅಧ್ಯಕ್ಷರಿಗೆ ಈ ಬಗ್ಗೆ ರೆಗ್ಯೂಲೇಷನ್ ರಚಿಸಲು ತಿಳಿಸಲಾಗುವುದು ಎಂದರು. ಕುಲಸಚಿವರು ಮಾತನಾಡುತ್ತಾ, ಸರ್ಕಾರಕ್ಕೆ ರೆಗ್ಯೂಲೇಷನ್ ಕಳುಹಿಸಿ ಸರ್ಕಾರದ ಅನುಮೋದನೆ ನಂತರ ಕ್ರಮಕೈಗೊಳ್ಳುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಶ್ರೀಪಾಲ್‌ರವರು ಮಾತನಾಡುತ್ತಾ, ಈ ಕೋರ್ಸ್‌ನೊಂದಿಗೆ ವಿಶ್ವವಿದ್ಯಾಲಯವು ಪೊಲೀಸ್ ನಾಗರೀಕ ಬಂದೂಕು ತರಬೇತಿಗೆ ಅವಕಾಶ ನೀಡಿದಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಸೌಲಭ್ಯ ಸಿಗಲಿದೆ ಎಂದರು. ಹಾಗೂ ಇದಕ್ಕೆ ಸಂಬಂಧಿಸಿದಂತೆ ವಿವರವಾಗಿ ಚರ್ಚಿಸಿದರು. ಕುಲಸಚಿವರು ಮಾತನಾಡುತ್ತಾ, ಈ ವಿಷಯದ ಬಗ್ಗೆ ಮಾನ್ಯ ಪೊಲೀಸ್ ಅಧೀಕ್ಷಕರೊಂದಿಗೆ (S.P) ಬಳಿ ಚರ್ಚಿಸುವುದಾಗಿ ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಶಿವಕುಮಾರ್ ಎಂ. ಇವರು ಇದು Skill Education ಅಥವಾ Un-Skilled Education ಎಂಬ ಬಗ್ಗೆ ಚರ್ಚಿಸಿದರು. ಕುಲಸಚಿವರು ಮಾತನಾಡುತ್ತಾ, ಸ್ನಾತಕ ವಿದ್ಯಾರ್ಥಿಗಳಿಗೆ Add on Course ಆಗಿ ಮಾಡಬಹುದು ಎಂದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡುತ್ತಾ, ಈ Course Service base ಆಗಿರಬೇಕು ಹಾಗೂ ಸಂಯೋಜನೆ ನೀಡುವಾಗ ಕೆಲವು ಷರತ್ತುಗಳನ್ನು ಹಾಕುವುದು ಒಳ್ಳೆಯದು ಎಂದರು.

**ನಿರ್ಣಯ:** ಮೇಲ್ಕಂಡ ಚರ್ಚೆಯಂತೆ Fire & Safety ಕೋರ್ಸ್‌ನ್ನು ನಡೆಸಲು ರೆಗ್ಯುಲೇಷನ್ ಸಿದ್ಧಪಡಿಸಿ ಪ್ರಾಧಿಕಾರಗಳ ಅನುಮೋದನೆ ಪಡೆದು ನಂತರ ಕುಲಾಧಿಪತಿಗಳ ಅನುಮೋದನೆ ದೊರೆತ ನಂತರ Malnad Institute of Skill Development and Training Centre, Shivamogga ಇವರೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2026–ಸಿಂ–5.07:** ಡಾ. ಹೊಸಹಳ್ಳಿ ಎಸ್. ರಾಮಸ್ವಾಮಿ – ಇವರನ್ನು ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ Visiting Professor ಆಗಿ ನೇಮಕ ಮಾಡುವ ಕುರಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಚರ್ಚೆ: ವಿಷಯ ಮಂಡಿಸಿದ ಕುಲಸಚಿವರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಡಾ.ಹೊಸಹಳ್ಳಿ ಎಸ್. ರಾಮಸ್ವಾಮಿ, Professor of Food Science and Agricultural Chemistry, Macdonald Campus, McGill University, 21, 111 Lakeshore, Ste Anne de Bellevue, Quebec H9X3V9, Canada ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡುವಂತೆ ವಿಭಾಗಾಧ್ಯಕ್ಷರು ಪ್ರಸ್ತಾವನೆ ಸಲ್ಲಿಸಿದ್ದಾರೆ. ಡಾ.ಹೊಸಹಳ್ಳಿ ಎಸ್. ರಾಮಸ್ವಾಮಿರವರು ಮೂಲತಃ ಶಿವಮೊಗ್ಗ ತಾಲ್ಲೂಕಿನ ಹೊಸಹಳ್ಳಿ ಗ್ರಾಮದವರಾಗಿದ್ದು, University of British Columbia, Bancouver, B.C, Canada ಇಲ್ಲಿ ಎಂ.ಎಸ್ಸಿ., ಮತ್ತು ಪಿಹೆಚ್.ಡಿ. ಪದವಿಯನ್ನು ಆಹಾರ ವಿಜ್ಞಾನ ವಿಷಯದಲ್ಲಿ ಪಡೆದಿದ್ದು, 1983–86ವರೆಗೆ ಆಹಾರ ವಿಜ್ಞಾನದಲ್ಲಿ ಪೋಸ್ಟ್ ಡಾಕ್ಟರಲ್ ಸಂಶೋಧನೆ ನಡೆಸಿದ್ದು, ನಂತರ 1986–87ರಲ್ಲಿ Industrial PDF, Okanagan Dried Fruits, OK Falls, British Collumbia, Canada ದಲ್ಲಿ ಮುಗಿಸಿದ್ದಾರೆ. ನಂತರ McGill University, Canada ದಲ್ಲಿ ಆಹಾರ ವಿಜ್ಞಾನ ವಿಷಯದ ಸಹಾಯಕ ಪ್ರಾಧ್ಯಾಪಕರಾಗಿ, ಸಹ ಪ್ರಾಧ್ಯಾಪಕರಾಗಿ ಮತ್ತು ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅವರು ಕೆನಡಾ, ಅಮೇರಿಕಾ ಮತ್ತು ಭಾರತದಲ್ಲಿ ಹಲವಾರು ಪ್ರಶಸ್ತಿಗಳು ಮತ್ತು ಫೆಲೋಶಿಪ್‌ಗಳನ್ನು ಪಡೆದಿದ್ದು, ಭಾರತದ ಹಲವು ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಹಲವು ಪುಸ್ತಕಗಳನ್ನು ಪ್ರಕಟಿಸಿದ್ದು, ಇವರ ಸಂಶೋಧನಾ ಲೇಖನಗಳು ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಗೊಂಡಿವೆ. ಆದುದರಿಂದ ಇವರನ್ನು ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ Visiting Professor ಆಗಿ ನೇಮಕ ಮಾಡುವ ಬಗ್ಗೆ ಹಾಗೂ ಇವರಿಗೆ ಮಾಸಿಕ ವೇತನ ಅಥವಾ ಗೌರವಧನ ನಿಗದಿಪಡಿಸುವ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ನಿರ್ಣಯ: ಚರ್ಚೆಯ ನಂತರ ಡಾ. ಹೊಸಹಳ್ಳಿ ಎಸ್. ರಾಮಸ್ವಾಮಿ – ಇವರನ್ನು ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ Visiting Professor ಆಗಿ ಒಂದು ವರ್ಷದ ಅವಧಿಗೆ ನೇಮಕ ಮಾಡಿ ಯು.ಜಿ.ಸಿ ಮಾರ್ಗಸೂಚಿ ಮತ್ತು ಸರ್ಕಾರದ ನಿಯಮಾವಳಿಯ ಪ್ರಕಾರ ಗೌರವಧನವನ್ನು ಹಾಗೂ ಪ್ರಯಾಣ ಭತ್ಯೆಯನ್ನು ನಿಗದಿಪಡಿಸಿ ಪಾವತಿಸಲು ನಿರ್ಣಯಿಸಲಾಯಿತು.

**2026–ಸಿಂ–5.08:** ಡಾ. ಸಿ.ಎಸ್. ದ್ವಾರಕನಾಥ್ ಇವರನ್ನು Professor of Practice ಆಗಿ ನೇಮಕ ಮಾಡುವ ಕುರಿತು.

ಚರ್ಚೆ: ಮಾನ್ಯ ಕುಲಪತಿಗಳು ಮಾತನಾಡಿ ಡಾ.ಸಿ.ಎಸ್. ದ್ವಾರಕನಾಥ್‌ರವರು ಇವರು ಭಾರತೀಯ ಸಂವಿಧಾನದ ಬಗ್ಗೆ ಅಪಾರ ಅನುಭವ ಹೊಂದಿದ್ದು ಇವರ ಸೇವೆಯನ್ನು ವಿಶ್ವವಿದ್ಯಾಲಯವು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದು ಉತ್ತಮವೆಂದರು. ಇವರನ್ನು ಆಹ್ವಾನಿಸಿ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತರೆ ವಿಭಾಗಗಳ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧನಾರ್ಥಿಗಳಿಗೆ ಅನುಕೂಲವಾಗುವುದೆಂದರು. ಡಾ.ಬಾಬುಜಗಜೀವನ್‌ರಾಮ್ ಅಧ್ಯಯನ ಕೇಂದ್ರದ ಅಡಿಯಲ್ಲಿ ನೇಮಕ ಮಾಡುವ ಬಗ್ಗೆ ಪ್ರಸ್ತಾಪಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಪ್ರೊ. ಚಂದ್ರಶೇಖರ್ ಮಾತನಾಡಿ ಡಾ.ಬಾಬುಜಗಜೀವನ್‌ರಾಮ್ ಅಧ್ಯಯನ ಪೀಠದಲ್ಲಿ ಈ ರೀತಿ ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದ್ದು ಅದರಡಿಯಲ್ಲಿ ನೇಮಕ ಮಾಡಿದಲ್ಲಿ ಯಾವುದೇ ಆಕ್ಷೇಪಣೆ ಅಥವಾ ಸಂಭಾವನೆಗೆ ತೊಂದರೆಯಾಗುವುದಿಲ್ಲವೆಂದರು.

ನಿರ್ಣಯ: ಚರ್ಚೆಯ ನಂತರ ಡಾ. ಸಿ.ಎಸ್. ದ್ವಾರಕನಾಥ್ ಇವರನ್ನು ಯು.ಜಿ.ಸಿ ನಿಯಮದ ಪ್ರಕಾರ Professor of Practice ಆಗಿ ಒಂದು ವರ್ಷದ ಅವಧಿಗೆ ನೇಮಕ ಮಾಡಿ ಯು.ಜಿ.ಸಿ ಮಾರ್ಗಸೂಚಿ ಮತ್ತು ಸರ್ಕಾರದ ನಿಯಮದನ್ವಯ ಗೌರವಧನ ಹಾಗೂ ಭತ್ಯೆಗಳನ್ನು ಪಾವತಿಸಲು ನಿರ್ಣಯಿಸಲಾಯಿತು.

**2026–ಸಿಂ–5.09:** ಡಾ. ರಾಕೇಶ್ ತಿವಾರಿ ಅವರನ್ನು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ Professor of Practice ಆಗಿ ನೇಮಕ ಮಾಡುವ ಕುರಿತು.

ಚರ್ಚೆ: ಈ ವಿಷಯದ ಕುರಿತು ಸ್ನಾತಕೋತ್ತರ ಪರಿಸರ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ.ಕೆ.ಯೋಗೇಂದ್ರ ಇವರನ್ನು ಸಭೆಗೆ ಕರೆಸಿ ಇದರ ಬಗ್ಗೆ ವಿವರಿಸುವಂತೆ ತಿಳಿಸಲಾಯಿತು.

ಡಾ.ರಾಕೇಶ್ ತಿವಾರಿ ರವರು 2006ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ ಪ್ರಥಮ ರ್‍ಯಾಂಕ್ ಹಾಗೂ ಸ್ವರ್ಣಪದಕದೊಂದಿಗೆ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ. ಪಡೆದಿದ್ದು, ಲೀಡ್ಸ್ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪಡೆದಿದ್ದಾರೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕರಾಗಿ, ಲೋ ಕಾರ್ಬನ್ ಫಾರ್ಮಿಂಗ್ ಸ್ಪೆಷಲಿಸ್ಟ್ ಆಗಿ, ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದಲ್ಲಿ ಮತ್ತು ಲೀಡ್ಸ್ ವಿಶ್ವವಿದ್ಯಾಲಯ, ಯು.ಕೆ.ದಲ್ಲಿ ಪೋಸ್ಟ್ ಡಾಕ್ಟರಲ್ ರೀಸರ್ಚ್‌ರ್ ಆಗಿ, ಕಾರ್ಯನಿರ್ವಹಿಸಿದ್ದು, ಉಪ್ಸಾಲಾ ವಿಶ್ವವಿದ್ಯಾಲಯ, ಸ್ವೀಡನ್‌ನಲ್ಲಿ Wenner-Gren Fellow ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಪ್ರಸ್ತುತ Bharathi Environment and Sustainable Techonology Solutions ಸಂಸ್ಥೆಯಲ್ಲಿ Co-founder ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ರಾಕೇಶ್ ತಿವಾರಿ ರವರು ಪರಿಸರ ವಿಜ್ಞಾನ, ಸಸ್ಯ ಪರಿಸರಶಾಸ್ತ್ರ, ಹವಾಮಾನ ಬದಲಾವಣೆ, ಕಾರ್ಬನ್ ವಿಜ್ಞಾನ ಹಾಗೂ ಪರಿಸರಮಾಪನ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಪರಿಣಿತಿಯನ್ನು ಹೊಂದಿದ್ದು, ಅವರು ಹಲವು ಸಂಶೋಧನಾ ಲೇಖನಗಳನ್ನು ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿಸಿದ್ದಾರೆ. ಅವರನ್ನು Professor of Practice ಆಗಿ ನೇಮಕ ಮಾಡುವುದರಿಂದ ಪ್ರಸ್ತುತ ಪರಿಸರ ವಿಜ್ಞಾನ ವಿಭಾಗವು NCBS-TIFR ಬೆಂಗಳೂರು ಇವರ ಸಹಯೋಗದಲ್ಲಿ ಕೈಗೊಂಡಿರುವ ದೀರ್ಘಕಾಲೀನ ಅರಣ್ಯ ಪರಿಸರ ಸಂಶೋಧನೆಗಳು, ಅಂತರರಾಷ್ಟ್ರೀಯ ಸಹಯೋಗ ಕಾರ್ಯಕ್ರಮಗಳು ಹಾಗೂ ಬ್ರಿಟೀಷ್ ಕೌನ್ಸಿಲ್ ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅವರ ಪರಿಣಿತಿ ಮತ್ತು ಅನುಭವವು ಅತ್ಯಂತ ಸಹಕಾರಿಯಾಗುವುದು ಮತ್ತು ಅವರಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನಾ ಹಾಗೂ ಅಂತರರಾಷ್ಟ್ರೀಯ ಸಹಯೋಗ ಚಟುವಟಿಕೆಗಳಿಗೆ ಮಹತ್ವದ ಬಲ ದೊರೆಯಲಿದ್ದು, ವಿದ್ಯಾರ್ಥಿಗಳು ಹಾಗೂ ಸಂಶೋಧನಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಶ್ರೀಪಾಲ್ ಇವರು ಮಾತನಾಡಿ ಶ್ರೀಮತಿ ಶಿವಾನಿ ಇವರನ್ನು ಸಹ Professor of Practice ಆಗಿ ನೇಮಕ ಮಾಡಿದಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ಎಂದರು. ಇದಕ್ಕೆ ಉತ್ತರಿಸಿದ ಕುಲಪತಿಗಳು ಮತ್ತು ಕುಲಸಚಿವರು ಅವರಿಂದ ಲಿಖಿತವಾದ ಒಂದು ಪ್ರಸ್ತಾವನೆ ಬಂದಲ್ಲಿ ಪರಿಗಣಿಸಬಹುದೆಂದರು.

ನಿರ್ಣಯ: ಚರ್ಚೆಯ ನಂತರ ಡಾ. ರಾಕೇಶ್ ತಿವಾರಿ ಅವರನ್ನು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಯು.ಜಿ.ಸಿ ಮಾರ್ಗಸೂಚಿ ಮತ್ತು ಸರ್ಕಾರದ ನಿಯಮಗಳಡಿಯಲ್ಲಿ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಪರಿಶೀಲಿಸಿ Professor of Practice ಆಗಿ ನೇಮಕ ಒಂದು ವರ್ಷದ ಅವಧಿಗೆ ನೇಮಕ ಮಾಡಲು ಹಾಗೂ ಡಾ.ಶಿವಾನಿ ಇವರಿಂದ ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಪರಿಶೀಲಿಸಿ ಅವರನ್ನೂ ಸಹ ಯು.ಜಿ.ಸಿ ಮತ್ತು ಸರ್ಕಾರದ ನಿಯಮಗಳಡಿಯಲ್ಲಿ Professor of Practice ಆಗಿ ನೇಮಕ ಮಾಡಿ ಸಂಭಾವನೆಯನ್ನು ನಿಗದಿಪಡಿಸಲು ನಿರ್ಣಯಿಸಲಾಯಿತು.

**2026–ಸಿಂ–5.09(ಎ):** ಡಾ. ಹೆಚ್.ಎಸ್. ಸಂತೋಷ್‌ಕುಮಾರ್ – ಇವರು ಮಲೇಷಿಯಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿಸುವ ಕುರಿತು.

**ಚರ್ಚೆ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಹೆಚ್.ಎಸ್.ಸಂತೋಷ್ ಕುಮಾರ್ ಇವರು University Sains Malaysia ಇವರು ಮಲೇಷಿಯಾದ ಪಿನ್ನಾಂಗ್ನದಲ್ಲಿ ದಿನಾಂಕ:14–09–2026 ರಿಂದ 17–09–2026ರವರೆಗೆ ನಡೆಯುವ The 25th International Conference on Bioinformatics and The 1st International Society for Computational Biology-Asia Pacific Conference ನಲ್ಲಿ ಭಾಗವಹಿಸಿ ಸಂಶೋಧನಾ ಲೇಖನವನ್ನು ಮಂಡಿಸಲು ಆಯ್ಕೆಯಾಗಿದ್ದು,ಇದರಲ್ಲಿ ಭಾಗವಹಿಸಲು ಅನುಮತಿ ನೀಡುವಂತೆ ಹಾಗೂ ದಿನಾಂಕ:13–09–2026 ರಿಂದ 20–09–2026ರವರೆಗೆ ವಿಭಾಗದಲ್ಲಿನ ಅನುಪಸ್ಥಿತಿಯನ್ನು ಅನ್ಯಕಾರ್ಯನಿಮಿತ್ತ ರಜೆ ಎಂದು ಪರಿಗಣಿಸಿ ಆದೇಶ ನೀಡುವಂತೆ ಕೋರಿರುತ್ತಾರೆ.

ಈ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಯಾಣವೆಚ್ಚಕ್ಕಾಗಿ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ANRF-ITS (Anusandan National Research Foundation-International Travel Support) ಇಲ್ಲಿಗೆ ಅರ್ಜಿ ಸಲ್ಲಿಸಿದ್ದು, ಅನುದಾನ (ಗ್ರಾಂಟ್) ಸಿಗಬಹುದು ಎಂದು ತಿಳಿಸಿರುತ್ತಾರೆ. ಆದ್ದರಿಂದ ಇವರಿಗೆ ಈ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಮತ್ತು ಅನ್ಯ ಕಾರ್ಯನಿಮಿತ್ತ ರಜೆ ಮಂಜೂರು ಮಾಡುವ ಸಲುವಾಗಿ ಮಂಡಿಸಲಾಗಿದೆ.

**ನಿರ್ಣಯ:** ಚರ್ಚೆಯ ನಂತರ ಡಾ.ಸಂತೋಷ್ ಕುಮಾರ್ ಹೆಚ್.ಎಸ್. ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರಿಗೆ ಮಲೇಷಿಯಾದ ಪಿನ್ನಾಂಗ್ನದಲ್ಲಿ ದಿನಾಂಕ:14–09–2026 ರಿಂದ 17–09–2026ರವರೆಗೆ ನಡೆಯುವ The 25th International Conference on Bioinformatics and The 1st International Society for Computational Biology-Asia Pacific Conference ನಲ್ಲಿ ಭಾಗವಹಿಸಿ ಸಂಶೋಧನಾ ಲೇಖನವನ್ನು ಮಂಡಿಸಲು ಅನುಮತಿಸಿದ ಸಭೆಯು ದಿನಾಂಕ:13–09–2026 ರಿಂದ 20–09–2026ರವರೆಗೆ ವಿಭಾಗದಲ್ಲಿನ ಅನುಪಸ್ಥಿತಿಯನ್ನು ಭತ್ಯೆ ರಹಿತ ಅನ್ಯಕಾರ್ಯನಿಮಿತ್ತ ರಜೆ ಎಂದು ಪರಿಗಣಿಸಿ ಮಂಜೂರು ಮಾಡಲು ನಿರ್ಣಯಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2026–ಸಿಂ–5.10:** 2027–28ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ/ಶಿಕ್ಷಣ ಪದವಿ ಕೋರ್ಸ್‌ಗಳ ಸಂಯೋಜನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ರಚನೆ ಮತ್ತು ಅನುಮೋದನೆ ಕುರಿತು.

**ಚರ್ಚೆ:** ಸದರಿ ವಿಷಯದ ಕುರಿತು ಡಾ.ಗಜಾನನ ಪ್ರಭು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ ಇವರನ್ನು ಸಭೆಗೆ ಕರೆಸಿ ಸಂಕ್ಷಿಪ್ತವಾಗಿ ವಿವರಿಸುವಂತೆ ತಿಳಿಸಲಾಯಿತು. ಪ್ರತಿ ವರ್ಷದಂತೆ 2027–28ನೇ ಸಾಲಿನ ಸಂಯೋಜನಾ ಪ್ರಕ್ರಿಯೆಗಾಗಿ ಸ್ಥಳೀಯ ವಿಚಾರಣಾ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡುವ ಸಲುವಾಗಿ ತಂಡಗಳನ್ನು ರಚಿಸಲಾಗಿದ್ದು ಇದನ್ನು ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

ನಿರ್ಣಯ: ಚರ್ಚೆಯ ನಂತರ 2027-28ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ/ಶಿಕ್ಷಣ ಪದವಿ ಕೋರ್ಸ್‌ಗಳ ಸಂಯೋಜನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲು ಮಂಡಿಸಿರುವ ಪಟ್ಟಿಯಲ್ಲಿ ಸಬ್ಬಾಟಿಕಲ್ ರಜೆ, ವಯೋನಿವೃತ್ತಿ ಮತ್ತು ಬೇರೆ ಉನ್ನತ ಹುದ್ದೆಗೆ ನೇಮಕಗೊಂಡು ವಿಶ್ವವಿದ್ಯಾಲಯದಿಂದ ಬಿಡುಗಡೆಗೊಂಡಿರುವ ಅಧ್ಯಾಪಕರುಗಳನ್ನು ಬದಲಿಸಿ ಸೂಕ್ತ ಮಾರ್ಪಾಡು ಮಾಡಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಿ ಸಂಯೋಜನಾ ಕಾರ್ಯವನ್ನು ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

2026-ಸಿಂ-5.10(ಎ): 2027-28ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳ ಪರಿಷ್ಕರಣೆ ಕುರಿತು.

ಚರ್ಚೆ: ಡಾ.ಗಜಾನನ ಪ್ರಭು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ ಇವರು ದಿನಾಂಕ:24-07-2026 ರಂದು ನಡೆದ ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ಸಭೆಯ ನಿರ್ಣಯದಂತೆ 2027-28ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳ ಪರಿಷ್ಕರಣೆ ಮಾಡುವ ಕುರಿತು ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

ನಿರ್ಣಯ: ಚರ್ಚೆಯ ನಂತರ ದಿನಾಂಕ:24-07-2026 ರಂದು ನಡೆದ ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ಸಭೆಯ ನಿರ್ಣಯದಂತೆ 2027-28ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸಂಯೋಜನಾ ಶುಲ್ಕಗಳನ್ನು 15% (ಶೇಕಡಾ 15) ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡಲು ಸಭೆಯು ಅನುಮೋದನೆ ನೀಡಿತು.

## ದೂರ ಶಿಕ್ಷಣ ನಿರ್ದೇಶನಾಲಯ

2026-ಸಿಂ-5.11: ಎಲ್.ಎಂ.ಎಸ್. ಸಾಫ್ಟ್‌ವೇರ್ ಪರಿಶೀಲನಾ ಸಮಿತಿ ಸಲ್ಲಿಸಿರುವ ವರದಿಯನ್ನು ದಿನಾಂಕ:04-08-2026ರ ಸಿಂಡಿಕೇಟ್ ಸಭೆಗೆ ಮಂಡಿಸುವ ಬಗ್ಗೆ.

ಚರ್ಚೆ: ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದ ಆನ್-ಲೈನ್ ಪದವಿ ಕೋರ್ಸುಗಳ ನಿರ್ವಹಣೆ ಸಂಬಂಧ ಅನುಷ್ಠಾನಗೊಂಡಿರುವ L.M.S. ಸಾಫ್ಟ್‌ವೇರ್ ಕುರಿತು ಪ್ರವೇಶಾತಿ ನೀಡಿರುವ ಅಧ್ಯಯನ ಸಾಮಗ್ರಿಗಳ ಸರಬರಾಜು, ಸಂಪರ್ಕ ತರಗತಿಗಳನ್ನು ನಡೆಸಿರುವ ಬಗ್ಗೆ ಹಾಗೂ ಮುಂದೆ ಆಗಬೇಕಾಗಿರುವ ಕಾರ್ಯಗಳ ಸಮಗ್ರ ಪರಿಶೀಲನೆಗೆ ರಚಿಸಲಾದ ಸಮಿತಿಯು ನೀಡಿರುವ ವರದಿಯನ್ನು ಪರಿಶೀಲನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ. ಎಂದು ಕುಲಸಚಿವರು ತಿಳಿಸಿದರು ಮುಂದುವರೆದು ಕುಲಸಚಿವರು ಮಾತನಾಡಿ ಸಮಿತಿಯು ಪ್ರತ್ಯೇಕವಾಗಿ ಎರಡು ವರದಿಯನ್ನು ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು. ಸದಸ್ಯರಾದ ಶ್ರೀ ಶ್ರೀಪಾಲ್ ಇವರು ಮಾತನಾಡಿ ತಾವು ಅಂದಿನ ಸಭೆಗೆ ಹಾಜರಾಗಿರುವುದಿಲ್ಲ ಅವರಿಗೆ ತುರ್ತು ಕೆಲಸವಿರುವುದರಿಂದ ದೂರವಾಣಿ ಮೂಲಕ ತಿಳಿಸಿ ಸಭೆಯನ್ನು ಇನ್ನೊಂದು ದಿನ ನಿಗದಿಗೊಳಿಸುವಂತೆ ಮನವಿ ಸಲ್ಲಿಸಲಾಗಿತ್ತು. ಆದರೆ ಸಭೆಯನ್ನು ಆ ದಿನವೇ ನಡೆಸಲಾಗಿರುತ್ತದೆ ಎಂದರು. ಕುಲಸಚಿವರು ಮಾತನಾಡಿ ಈ L.M.S. ಸಾಫ್ಟ್‌ವೇರ್ ಕುರಿತು ಲೋಕಾಯುಕ್ತದಲ್ಲಿ ದೂರು ದಾಖಲಾಗಿದ್ದು, ದಾಖಲೆಗಳನ್ನು ಲೋಕಾಯುಕ್ತಕ್ಕೆ ನೀಡಿದ್ದು, ಪ್ರಕರಣದ ವಿಚಾರಣೆ ನಡೆಯುತ್ತಿದೆ ಎಂದರು.

ಮಾನ್ಯ ಕುಲಸಚಿವರು ಮಾತನಾಡುತ್ತಾ, ಹಿಂದಿನ ಕುಲಸಚಿವರು ತಯಾರಿಸಿರುವ ವರದಿ ಹಾಗೂ ಹಣಕಾಸು ಅವ್ಯವಹಾರದ ಬಗ್ಗೆ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಸರ್ಕಾರದಿಂದ ಉನ್ನತ ಮಟ್ಟದ ತನಿಖೆ ಆಗುವವರೆಗೆ ಉಳಿದ ಬಾಕಿ ಹಣ ಪಾವತಿ (Payment) ಮಾಡದೇ ಇರಲು ಹಾಗೂ ವಿಚಾರಣೆ ಕೈಗೊಂಡು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಅವ್ಯವಹಾರ ಸಾಬೀತಾದ ನಂತರ ಹಣ ವಸೂಲಾತಿಗೆ (Recovery) ಕ್ರಮ ಕೈಗೊಳ್ಳಲಾಗುವುದು ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಮೇಲ್ಕಂಡ ಚರ್ಚೆಯಲ್ಲಿ ಆದ ನಿರ್ಣಯದಂತೆ ಕ್ರಮಕೈಗೊಳ್ಳಲು ಹಾಗೂ ಈ ಹಿಂದೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಈ ಬಗ್ಗೆ ಸಮಿತಿಯನ್ನು ರಚಿಸಿ ಇನ್ನೊಮ್ಮೆ ತನಿಖೆ ನಡೆಸಿ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಇದರ ಪೂರ್ಣ ವರದಿ ಸಲ್ಲಿಕೆಯಾಗುವವರೆಗೆ ಯಾವುದೇ ಬಾಕಿ ಹಣ ಪಾವತಿಸದೇ ಇರಲು ನಿರ್ಣಯಿಸಲಾಯಿತು.

## ಶೈಕ್ಷಣಿಕ ವಿಭಾಗ

2026–ಸಿಂ–5.12: "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ" ಹೆಸರಿನಲ್ಲಿ ದತ್ತಿನಿಧಿ ನಗದು ಬಹುಮಾನವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ. ಶಂಕರಘಟ್ಟ ಇವರು **"ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ"** ಹೆಸರಿನಲ್ಲಿ 2024–25ನೇ (36ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಜ್ಞಾನ ನಿಕಾಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಪಡೆದ** ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಲುವಾಗಿ ರೂ.25,000/–ಗಳ **(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ)** ದತ್ತಿನಿಧಿಯನ್ನು ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

2026–ಸಿಂ–5.12(ಎ) "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ" ಹೆಸರಿನಲ್ಲಿ ದತ್ತಿನಿಧಿ ನಗದು ಬಹುಮಾನವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ. ಶಂಕರಘಟ್ಟ ಇವರು **"ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ"** ಹೆಸರಿನಲ್ಲಿ 2024–25ನೇ (36ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯ ಮಟ್ಟದಲ್ಲಿ ಕಲಾ ನಿಕಾಯದ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಪಡೆದ** ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಲುವಾಗಿ ರೂ.25,000/–ಗಳ **(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ)** ದತ್ತಿನಿಧಿಯನ್ನು ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

## ಪರೀಕ್ಷಾ ವಿಭಾಗ

2026–ಸಿಂ–5.13: ದಿನಾಂಕ:07–04–2026 ಹಾಗೂ 08–04–2026 ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ ಕುರಿತು.

ಚರ್ಚೆ: ಕುಲಸಚಿವರು (ಮೌಲ್ಯಮಾಪನ) ರವರು ವಿಷಯ ಮಂಡಿಸಿ 2026–27ನೇ ಸಾಲಿನ ಕಲಾ,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

ವಿಜ್ಞಾನ, ವಾಣಿಜ್ಯ, ಶಿಕ್ಷಣ ಹಾಗೂ ಕಾನೂನು ನಿಕಾಯಗಳ ಸ್ನಾತಕ ಮತ್ತು ಸ್ನಾತಕೋತ್ತರ (ರೆಗ್ಯುಲರ್ ಮತ್ತು ದೂರಶಿಕ್ಷಣ) ಕೋರ್ಸುಗಳ ಪರೀಕ್ಷೆಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಯಮ-2000 ದ ಪ್ರಕರಣ 36(3) ರನ್ವಯ ವಿವಿಧ ಪರೀಕ್ಷಕರ ನೇಮಕಾತಿ ಮಂಡಳಿಗಳು ಸಂಬಂಧಿಸಿದ ಪರೀಕ್ಷಾ ಮಂಡಳಿಗಳನ್ನು ರಚಿಸಿರುತ್ತದೆ. ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಪ್ರಕ್ರಿಯೆಗಳಲ್ಲಿ ಈ ಮಂಡಳಿಗಳು ತುರ್ತಾಗಿ ಕಾರ್ಯಪ್ರವೃತ್ತರಾಗಬೇಕಾದ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಪರೀಕ್ಷಕರ ನೇಮಕಾತಿ ಮಂಡಳಿಗಳ ಶಿಫಾರಸ್ಸಿನ ಅನುಸಾರ ವಿವಿಧ ಪರೀಕ್ಷಾ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲಾಗಿದ್ದು ಇದನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಪರೀಕ್ಷಕರ ನೇಮಕಾತಿ ಮಂಡಳಿಗಳ ಶಿಫಾರಸ್ಸಿನ ಅನುಸಾರ ವಿವಿಧ ಪರೀಕ್ಷಾ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲಾಗಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**ಯು.ಯು.ಸಿ.ಎಂ.ಎಸ್. ವಿಭಾಗ**

**2026-ಸಿಂ-5.14:** ಪರೀಕ್ಷಾ ವಿಭಾಗದ ಮೌಲ್ಯಮಾಪನ ಪ್ರಕ್ರಿಯೆಯನ್ನು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಲಭ್ಯವಿರುವ Digital Evaluation ಸೌಲಭ್ಯವನ್ನು ಬಳಸಿಕೊಂಡು ನಿರ್ವಹಿಸುವ ಕುರಿತು.

**ಚರ್ಚೆ:** ಕುಲಸಚಿವರು(ಮೌಲ್ಯಮಾಪನ) ರವರು ವಿಷಯ ಮಂಡಿಸಿ ಮಾತನಾಡುತ್ತಾ, ಸರ್ಕಾರದಿಂದಲೇ Digital Evaluation ಗಾಗಿ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುವುದಾಗಿ ತಿಳಿಸಿ ಇದರಲ್ಲೇನಾದರೂ ಕುಂದುಕೊರತೆಗಳಿದ್ದಲ್ಲಿ ಯು.ಯು.ಸಿ.ಎಂ.ಎಸ್. ಕಛೇರಿಯನ್ನು ಸಂಪರ್ಕಿಸುವಂತೆ ತಿಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

ಸದಸ್ಯರುಗಳಾದ ಶ್ರೀ ಶ್ರೀಪಾಲ್, ಡಾ.ಪ್ರತಿಭಾ, ಡಾ.ಚೆನ್ನಪ್ಪ, ಶ್ರೀ ಶಿವಕುಮಾರ್.ಡಿ.ಎಸ್, ಹಾಗೂ ಡಾ.ಚಿದಾನಂದ ರವರು Digital Evaluation ಬಗ್ಗೆ ಇರುವ ಅನಾನುಕೂಲಗಳನ್ನು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಕಾರ್ಯಾಗಾರ ಮಾಡುವುದಾಗಿ ಕುಲಸಚಿವರು (ಮೌಲ್ಯಮಾಪನ) ರವರು ತಿಳಿಸಿದರು.

ಸದಸ್ಯರಾದ ಶ್ರೀ ಶ್ರೀಪಾಲ್‌ರವರು ಮಾತನಾಡುತ್ತಾ, ವಿದ್ಯಾರ್ಥಿಗಳಿಗೆ ತುಂಬಾ ಸಮಸ್ಯೆಯಾಗುತ್ತಿರುವುದರಿಂದ ಇದನ್ನು ಶೀಘ್ರವಾಗಿ ಬಗೆಹರಿಸಲು ಒತ್ತಾಯಿಸಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, Digital Evaluation ನಿಂದ ಅನೇಕ ತೊಂದರೆಗಳಾಗುತ್ತಿದ್ದು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದು ಹೆಚ್ಚು ಹಣವೂ ಖರ್ಚಾಗುತ್ತಿದೆ ಎಂದರು. ಕುಲಸಚಿವರು (ಮೌಲ್ಯಮಾಪನ) ರವರು ಮಾತನಾಡಿ ಸರ್ಕಾರದ ಸಭೆಯಲ್ಲಿ ಈ ಹಿಂದೆ ಅನುಸರಿಸುತ್ತಿದ್ದ ಪದ್ಧತಿಯಂತೆ ಅಂಕಪಟ್ಟಿಯನ್ನು ನೀಡುವ ವ್ಯವಸ್ಥೆಗೆ ಮನವಿ ಸಲ್ಲಿಸಲಾಗಿದೆ ಎಂದರು.

ಮಾನ್ಯ ಕುಲಸಚಿವರು ಮಾತನಾಡುತ್ತಾ, ಪರೀಕ್ಷಾ ವಿಭಾಗದ ಫಲಿತಾಂಶ ಇನ್ನಿತರೆ ಕಾರ್ಯಚಟುವಟಿಕೆಗಳ ಸುಧಾರಣಾ ಕ್ರಮಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ಒಂದು ಸಮಿತಿಯನ್ನು ರಚಿಸಲಾಗಿದೆ ಹಾಗೂ ಸಮಿತಿಗೆ SOP ತಯಾರಿಸಿ ನೀಡುವಂತೆಯೂ ತಿಳಿಸಲಾಗಿದೆ. ಮುಂದಿನ ಸಿಂಡಿಕೇಟ್ ಸಭೆಗೆ ವಿವರವಾದ ಮಾಹಿತಿಯನ್ನು ಮಂಡಿಸಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡುತ್ತಾ, ಅಂಕಪಟ್ಟಿ ಶುಲ್ಕವನ್ನು ಪಡೆಯುತ್ತಿರುವ ಬಗ್ಗೆ ಕೇಳಿದರು. ತಾತ್ಕಾಲಿಕ ಪದವಿ ಪ್ರಮಾಣ ಪತ್ರ (ಪಿ.ಡಿ.ಸಿ.) ಹಾಗೂ ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರಕ್ಕೆ (ಪಿ.ಪಿ.ಸಿ) ಮಾತ್ರ ಶುಲ್ಕ ತೆಗೆದುಕೊಳ್ಳುತ್ತಿರುವ ಅಂಶವನ್ನು ಕುಲಸಚಿವ (ಮೌಲ್ಯಮಾಪನ) ರವರು ಸಭೆಗೆ ತಿಳಿಸಿದರು.

ಶುಲ್ಕ ಸಂಗ್ರಹದ ಕುರಿತು ಹಾಗೂ ಆಂತರಿಕ ವೆಚ್ಚಗಳ ಕುರಿತು ಮಾನ್ಯ ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು.

ನಿರ್ಣಯ: ಚರ್ಚೆಯ ನಂತರ ಸದರಿ ವಿಷಯದ ಕುರಿತು ಯು.ಯು.ಸಿ.ಎಂ.ಎಸ್.ನಿಂದ ಬರುವ ಆದೇಶ /ನಿರ್ದೇಶನಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಿ ಜಾರಿಗೊಳಿಸಲು ನಿರ್ಣಯಿಸಲಾಯಿತು.

## ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ

**2026–ಸಿಂ–5.15:** ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಸಂಯೋಜನಾಧಿಕಾರಿಯಾಗಿ ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ಡಾ.ರಾಜನಾಯಕ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರು ದಿನಾಂಕ:10–07–2026 ರಿಂದ ದಿನಾಂಕ:09–05–2027 ರವರೆಗೆ 10 ತಿಂಗಳು ಸಬ್ಬಾಟಿಕಲ್ ರಜೆಯ ಮೇಲೆ ತೆರಳಿರುವುದರಿಂದ ವಿಭಾಗಕ್ಕೆ ಡಾ.ಶ್ರೀಶೈಲ್ ಇವರನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಸಂಯೋಜನಾಧಿಕಾರಿಗಳಾಗಿ ನೇಮಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2026–ಸಿಂ–5.16:** ಡಾ. ಜಗನ್ನಾಥ ಕೆ. ಡಾಂಗೆ, ಪ್ರಾಧ್ಯಾಪಕರು – ಇವರಿಗೆ ಸಬ್ಬಾಟಿಕಲ್ ರಜೆ ಮಂಜೂರು ಮಾಡುವ ಬಗ್ಗೆ.

ಚರ್ಚೆ: ವಿಷಯ ಮಂಡಿಸಿದ ಕುಲಸಚಿವರು ಡಾ ಜಗನ್ನಾಥ ಕೆ ಡಾಂಗೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರು **"Experiments in Education: Theories and Models"** ಎಂಬ ವಿಷಯದ ಕುರಿತು ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ದಿನಾಂಕ:01–04–2026 ರಿಂದ 31–03–2027 ರವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ದಿನಾಂಕ:23–12–2025 ರಂದು ಮನವಿ ಸಲ್ಲಿಸಿದ್ದು, ತತ್ಸಂಬಂಧ ದಿನಾಂಕ:09–01–2026 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಸದರಿಯವರಿಗೆ ದಿನಾಂಕ:01–04–2026 ರಿಂದ 31–03–2027ರವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಬಾಕಿ ಇರುವ ಕೆಲಸಗಳನ್ನು ಪೂರೈಸಿರುವ ಬಗ್ಗೆ ಮಾನ್ಯ ಕುಲಸಚಿವರಿಗೆ ವರದಿ ಸಲ್ಲಿಸಿ, ಸದರಿ ವರದಿಯನ್ನು ಮಾನ್ಯ ಕುಲಪತಿಗಳು ಅಂಗೀಕರಿಸಿದ ನಂತರ ಅನುಮತಿಸಲಾಗಿತ್ತು.

ಡಾ ಜಗನ್ನಾಥ ಕೆ ಡಾಂಗೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರು ಮನವಿ ಸಲ್ಲಿಸಿ, ದೂರ ಶಿಕ್ಷಣ ನಿರ್ದೇಶನಾಲಯಲ್ಲಿ ನಿರ್ದೇಶಕರ ಹುದ್ದೆಯನ್ನು ನಿರ್ವಹಿಸಿ ಮಾನ್ಯ ಕುಲಪತಿಗಳು ಸೂಚಿಸಿರುವ ಕಾರ್ಯಗಳನ್ನು 04 ತಿಂಗಳಲ್ಲಿ ಪೂರ್ಣಗೊಳಿಸಿದ್ದು, ನನ್ನ ಶೈಕ್ಷಣಿಕ ಬೆಳವಣಿಗೆಯ ಅವಶ್ಯಕತೆಗಾಗಿ **"Experiments in Education: Theories and Models"** ಎಂಬ ವಿಷಯದ ಕುರಿತು ಗ್ರಂಥವನ್ನು ಹೊರತರುವ ಸಂಬಂಧ ದಿನಾಂಕ:17–08–2026 ರಿಂದ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಸದರಿಯವರ ಕೋರಿಕೆಯ ಮೇರೆಗೆ ದಿನಾಂಕ:17-08-2026 ರಿಂದ 16-08-2027ರವರೆಗೆ ಒಂದು ವರ್ಷದ ಸಬ್ಬಾಟಿಕಲ್ ರಜೆಯ ಮೇಲೆ ತೆರಳಲು ಅನುಮತಿ ನೀಡುವ ಕುರಿತು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀಮತಿ ಸಾಕಮ್ಮ ಬಿ. ಇವರು ಮಾತನಾಡುತ್ತಾ, ಅಧ್ಯಾಪಕರುಗಳು ಸಬ್ಬಾಟಿಕಲ್ ರಜೆಯ ಮೇಲೆ ತೆರಳುವುದರಿಂದ ಖಾಯಂ ಅಧ್ಯಾಪಕರುಗಳ ಕೊರತೆಯಿಂದ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಇಳಿಕೆ ಆಗುತ್ತಿದೆ ಎಂದರು. ಸದಸ್ಯರಾದ ಶ್ರೀ ಬಸವರಾಜ್‌ರವರು ಸಬ್ಬಾಟಿಕಲ್ ರಜೆಯ ಮೇಲೆ ಅಧ್ಯಾಪಕರನ್ನು ಕಳುಹಿಸುವುದನ್ನು ಮಿತಿ (Limit) ಮಾಡಲು ತಿಳಿಸಿದರು. ಸದಸ್ಯರಾದ ಶ್ರೀಪಾಲ್ ರವರು ಸಬ್ಬಾಟಿಕಲ್ ರಜೆಯ ಮೇಲೆ ತೆರಳಿದ ಅಧ್ಯಾಪಕರು ಹೊರತರುವ ಗ್ರಂಥಗಳ ಮಾಹಿತಿಯನ್ನು ಸಭೆಗೆ ನೀಡಲು ಕೋರಿದರು. ಮುಂದಿನ ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಹಾಗೂ ಸಿಬ್ಬಂದಿಯ ಲಭ್ಯತೆ ಹಾಗೂ ಇತರೆ ಮಾಹಿತಿ ಪರಿಶೀಲಿಸಿ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡಲಾಗುವುದು ಎಂದರು. ಸದಸ್ಯರಾದ ಶ್ರೀ ಶ್ರೀಪಾಲ್ ಇವರು ಮಾತನಾಡುತ್ತಾ, ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ 01 ಕೋಟಿಗೂ (ರೂಪಾಯಿ ಒಂದು ಕೋಟಿ ಮಾತ್ರ) ಅಧಿಕ ಶುಲ್ಕವನ್ನು ಸಂಗ್ರಹಿಸಲಾಗಿದ್ದು ವಿಶ್ವವಿದ್ಯಾಲಯದ ನಿಧಿಗೆ 05 ಲಕ್ಷಗಳನ್ನು (ರೂಪಾಯಿ ಐದು ಲಕ್ಷ ಮಾತ್ರ) ಸಂದಾಯ ಮಾಡಲಾಗಿದೆ ಎಂದರು. ಸದಸ್ಯರಾದ ಶ್ರೀ ಶಿವಕುಮಾರ್ ಡಿ.ಎಸ್. ಇವರು ಮಾತನಾಡಿ ಅಧ್ಯಯನ ಕೇಂದ್ರದವರು ನ್ಯಾಯಾಲಯಕ್ಕೆ ಹೋಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ ದೂರಶಿಕ್ಷಣ ವಿಭಾಗದಲ್ಲಿ ಈ ಹಿಂದೆ ಪ್ರವೇಶ ಪಡೆದು ಪರೀಕ್ಷೆ ನಡೆಸದೇ ಇರುವ ವಿಷಯವು ಇತ್ಯರ್ಥವಾಗದೇ ಇದ್ದು ಇನ್ನೂ ಕೆಲವು ಮುಖ್ಯ ವಿಷಯಗಳು ಬಾಕಿ ಇರುವುದರಿಂದ ಇವರನ್ನು ರಜೆಯ ಮೇಲೆ ಕಳುಹಿಸಿದರೆ ತೊಂದರೆಯಾಗಬಹುದು ಎಂದರು. ಈ ಬಗ್ಗೆ ದೀರ್ಘ ಚರ್ಚೆಯ ನಂತರ ಕೆಲವು ಸದಸ್ಯರುಗಳು ಪ್ರೊ.ಜಗನ್ನಾಥ ಡಾಂಗೆ ಅವರನ್ನೇ ಸಭೆಗೆ ಕರೆಸಿ ಈ ಬಗ್ಗೆ ವಿಚಾರಿಸುವುದು ಸೂಕ್ತ ಎಂದರು. ನಂತರ ಪ್ರೊ.ಜಗನ್ನಾಥ ಕೆ. ಡಾಂಗೆ ಅವರನ್ನು ಸಭೆಗೆ ಕರೆಸಿ 1700 ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವುದರ ಕುರಿತು ಮಾಹಿತಿ ಪಡೆಯಲಾಯಿತು. ಇದಕ್ಕೆ ಉತ್ತರಿಸಿದ ಅವರು ಈ ವಿಷಯವು 2020 ರ 2ನೇ ಸೈಕಲ್‌ಗೆ ಸಂಬಂಧಿಸಿದ್ದಾಗಿದ್ದು ಅವರು ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸುವ ಪೂರ್ವದಲ್ಲಿನ ವಿಷಯಗಳಾಗಿರುತ್ತದೆ. ಅವರ ಅವಧಿಯಲ್ಲಿ ಬಾಕಿಯಿರುವ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಡಾ. ಜಗನ್ನಾಥ ಕೆ. ಡಾಂಗೆ, ಪ್ರಾಧ್ಯಾಪಕರು – ಇವರಿಗೆ ಸಬ್ಬಾಟಿಕಲ್ ರಜೆ ಮಂಜೂರು ಮಾಡುವ ಕುರಿತ ವಿಷಯವನ್ನು ತಡೆಹಿಡಿಯಲು ನಿರ್ಣಯಿಸಲಾಯಿತು.

**2026–ಸಿಂ–5.17:** ಶ್ರೀಮತಿ ಮಂಜುಳ ಎಸ್. ಇವರಿಗೆ ವೇತನ ನಿಗದೀಕರಣ ಮಾಡುವ ಕುರಿತು.

ಚರ್ಚೆ: ವಿಷಯ ಮಂಡಿಸಿದ ಕುಲಸಚಿವರು, ಈ ವಿಷಯದ ಕುರಿತು ಈ ಹಿಂದಿನ ಸಭೆಯಲ್ಲಿಯೇ ಚರ್ಚೆ ಮಾಡಿ ವೇತನ ನಿಗದೀಕರಣದ ಬಗ್ಗೆ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಈ ಮಧ್ಯೆ ವೇತನ ನಿಗದಿಪಡಿಸುವ ಹಂತದಲ್ಲಿ ಶ್ರೀ ಶಶಿಧರ್ ಎನ್.ಇ, ಸಮಾಜ ಸೇವಕರು, ನೆಲ್ಲಿಸರ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಇವರು ಶ್ರೀಮತಿ ಮಂಜುಳ ಎಸ್. ಇವರು ದೂರ ಶಿಕ್ಷಣ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ಎಸ್.ಬಿ.ಎಂ ಬ್ಯಾಂಕ್‌ನ ಸೀಲ್ ಬಳಸಿಕೊಂಡು ಚಲನ್‌ಗಳ ಮೇಲೆ ನಕಲಿ ಸೀಲುಗಳನ್ನು ಹಾಕಿ ವಿದ್ಯಾರ್ಥಿಗಳಿಂದ ಹಣ ಪಡೆದು ಪ್ರವೇಶ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಮಾಡಿಕೊಂಡಿರುತ್ತಾರೆ. ಈ ವಿಷಯವಾಗಿ ಇಲಾಖಾ ವಿಚಾರಣೆಗೆ ಆದೇಶವಾಗಿದ್ದು, ಇಲಾಖಾ ವಿಚಾರಣೆ ಪೂರ್ಣಗೊಂಡಿರುವುದಿಲ್ಲ. ವಿಚಾರಣೆ ಬಾಕಿ ಇದ್ದಲ್ಲಿ ಬಡ್ತಿ ನೀಡಲು ಅವಕಾಶವಿಲ್ಲದಿದ್ದರೂ ಸಹ ಹಿಂದಿನ ಕುಲಸಚಿವರಾದ ಶ್ರೀ ಮಂಜುನಾಥ್ ಎ.ಎಲ್. ಇವರು ಕಿರಿಯ ಸಹಾಯಕ ಹುದ್ದೆಯ ಹಂತದಿಂದ ಶಾಖಾಧಿಕಾರಿ ಹುದ್ದೆಯ ಹಂತದವರೆಗೂ ಬಡ್ತಿಗಳನ್ನು ನೀಡಿರುವ ಕ್ರಮವನ್ನು ಆಕ್ಷೇಪಿಸಿ ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸಲಾಗಿರುವ ದೂರನ್ನು ವಿಶ್ವವಿದ್ಯಾಲಯಕ್ಕೆ ದಿನಾಂಕ:17-01-2026ರ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1) ರ ಪತ್ರದೊಂದಿಗೆ ಸಲ್ಲಿಸಿ ಸದರಿಯವರ ದೂರು ಮನವಿಯಲ್ಲಿನ ಅಂಶಗಳನ್ನು ನಿಯಮಾನುಸಾರ ಪರಿಶೀಲಿಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನಿರ್ದೇಶನವಾಗಿರುತ್ತದೆ. ಅದರಂತೆ ಸದರಿಯವರ ಪ್ರಕರಣವನ್ನು ಪುನರ್ ಪರಿಶೀಲನೆಗಾಗಿ ಮಂಡಿಸಲಾಗಿದೆ ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಶ್ರೀಮತಿ ಮಂಜುಳ ಎಸ್. ಇವರ ನ್ಯಾಯಾಲಯದ ಪ್ರಕರಣದಲ್ಲಿ ನ್ಯಾಯಾಲಯವು ನೀಡಿರುವ ತೀರ್ಪಿನ ಆದೇಶವನ್ನು ಸರ್ಕಾರಕ್ಕೆ ಕಳುಹಿಸಿ, ಪತ್ರ ಬರೆಯಲು ನಿರ್ಣಯಿಸಲಾಯಿತು.

**2026-ಸಿಂ-5.18:** ಡಾ. ಗುರುಲಿಂಗಯ್ಯ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ – ಇವರನ್ನು ಹಿರಿಯ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಡಾ. ಎಂ. ಗುರುಲಿಂಗಯ್ಯ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಇವರಿಗೆ ದಿನಾಂಕ:28-07-2025 ರಿಂದ 27-07-2026 ರವರೆಗೆ ಒಂದು ವರ್ಷದ ಅವಧಿಗೆ ಸಬ್ಯಾಟಿಕಲ್ ರಜೆಯನ್ನು ಮಂಜೂರು ಮಾಡಲಾಗಿತ್ತು.

ಸರ್ಕಾರದ ಅಧಿಸೂಚನೆಯಲ್ಲಿ ಸದರಿಯವರನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು ಇಲ್ಲಿನ ನಿರ್ದೇಶಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ 05 ವರ್ಷದ ಅವಧಿಗೆ ಅಥವಾ ಸದರಿಯವರಿಗೆ 65 ವರ್ಷ ಪೂರ್ಣಗೊಳ್ಳುವವರೆಗೆ ಇವೆರಡರಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರಗೆ ನೇಮಿಸಲಾಗಿದೆ.

ತತ್ಸಂಬಂಧ, ಡಾ. ಎಂ.ಗುರುಲಿಂಗಯ್ಯ, ಹಿರಿಯ ಪ್ರಾಧ್ಯಾಪಕರು – ಇವರು ಸದರಿ ಹುದ್ದೆಗೆ ವರದಿ ಮಾಡಿಕೊಳ್ಳಲು ಅನುಕೂಲವಾಗುವಂತೆ ದಿನಾಂಕ:09-07-2026 ರಿಂದ 27-07-2026 ರವರೆಗಿನ ಸಬ್ಯಾಟಿಕ್ ರಜೆಯನ್ನು ರದ್ದುಗೊಳಿಸಿ, ಈ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸುವಂತೆ ಕೋರಿ ಮನವಿ ಸಲ್ಲಿಸಿದ್ದರು. ಸದರಿಯವರ ಕೋರಿಕೆ ಮೇರೆಗೆ ದಿನಾಂಕ:09-07-2026 ರಿಂದ 27-07-2026 ರವರೆಗಿನ ಸಬ್ಯಾಟಿಕ್ ರಜೆಯನ್ನು ರದ್ದುಗೊಳಿಸಿ, ದಿನಾಂಕ:09-07-2026 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಅಂಗೀಕರಿಸಿ, ಸದರಿ ಹಿರಿಯ ಪ್ರಾಧ್ಯಾಪಕರನ್ನು ದಿನಾಂಕ:09-07-2026ರ ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಅಧಿಸೂಚನೆಯನ್ವಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು ಇಲ್ಲಿನ ನಿರ್ದೇಶಕರ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಕೂಲವಾಗುವಂತೆ ದಿನಾಂಕ:10-07-2026ರ ಪೂರ್ವಾಹ್ನದಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇಲ್ಲಿನ ಹಿರಿಯ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶ ಹೊರಡಿಸಲಾಗಿದೆ ಹಾಗೂ ಸಬ್ಯಾಟಿಕಲ್ ರಜೆಯನ್ನು ಮಂಜೂರು ಮಾಡಲಾದ ಆದೇಶದಲ್ಲಿ ವಿಧಿಸಲಾದ ಷರತ್ತನ್ನು ಪೂರೈಸಿದ ನಂತರ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ



Scanned with OKEN Scanner

ಸದರಿಯವರ ಅಂತಿಮ ವೇತನ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ ಎಂದರು.

ಆದುದರಿಂದ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಬಿಡುಗಡೆಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಗೆ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಡಾ. ಗುರುಲಿಂಗಯ್ಯ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ಇವರನ್ನು ದಿನಾಂಕ:09-07-2026ರ ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಅಧಿಸೂಚನೆಯನ್ವಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು ಇಲ್ಲಿನ ನಿರ್ದೇಶಕರ ಹುದ್ದೆಗೆ ನೇಮಕ ಮಾಡಿದ ಹಿನ್ನೆಲೆಯಲ್ಲಿ, ಅವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುವಾಗುವಂತೆ ದಿನಾಂಕ:10-07-2026ರ ಪೂರ್ವಾಹ್ನದಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2026-ಸಿಂ-5.19:** ದಿನಾಂಕ:15-07-2026 ಮತ್ತು 16-07-2026 ರಂದು ನಡೆದ Screening cum Evaluation ಮಂಡಳಿ ಹಾಗೂ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರಿಗೆ ವೃತ್ತಿಪದೋನ್ನತಿಗಾಗಿ ದಿನಾಂಕ:15-07-2026 ಮತ್ತು 16-07-2026 ರಂದು ನಡೆದ Screening cum Evaluation ಮಂಡಳಿ ಹಾಗೂ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ಸಮಿತಿ ಸಭೆಗಳ ನಡಾವಳಿಗಳನ್ನು ಪರಿಶೀಲಿಸಿದ ಸಭೆಯು ಡಾ.ಶಿವಾನಂದ. ಸ್ವಾಮಿ ಕೆ.ಆರ್, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರ False Publication ನನ್ನು ಗಮನಿಸಿ ಇವರನ್ನು ಹೊರತುಪಡಿಸಿ ಇನ್ನುಳಿದ 10 ಜನರ B.O.A ಸಮಿತಿ ಸಭೆಯ ನಡಾವಳಿಯನ್ನು ಈ ಕೆಳಗಿನಂತೆ ಅನುಮೋದಿಸಿತು.

| ಕ್ರ ಸಂ. | ಅಧ್ಯಾಪಕರ ಹೆಸರು ಮತ್ತು ವಿಭಾಗ | ಪ್ರಸ್ತುತ ಹೊಂದಿರುವ ಹುದ್ದೆ | ವೃತ್ತಿ ಪದೋನ್ನತಿ ಕೋರಿರುವ ಹುದ್ದೆ | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ/ ಷರಾ |
|---|---|---|---|---|
| 01 | ಡಾ.ಹೆಚ್ ಎಸ್ ಸಂತೋಷ್ ಕುಮಾರ್ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಹ ಪ್ರಾಧ್ಯಾಪಕ Academic Level – 13A | ಪ್ರಾಧ್ಯಾಪಕ Academic Level –14 | 19-06-2025 |
| 02 | ಡಾ. ಎಸ್ ಹೆಚ್ ಬಸವರಾಜಪ್ಪ ಸ್ನಾತಕೋತ್ತರ ಪರಿಸರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಹಾಯಕ ಪ್ರಾಧ್ಯಾಪಕ Academic Level – 11 | ಸಹಾಯಕ ಪ್ರಾಧ್ಯಾಪಕ Academic Level –12 | 01-03-2026 |
| 03 | ಡಾ.ಗೋಪಾಲ ಟಿ.ಡಿ. ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | ಸಹಾಯಕ ಪ್ರಾಧ್ಯಾಪಕ Academic Level – 11 | ಸಹಾಯಕ ಪ್ರಾಧ್ಯಾಪಕ Academic Level 12 | 27-10-2021 |
| 04 | ಡಾ.ವೆಂಕಟೇಶ್ ಪಿ ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. | ಸಹ ಪ್ರಾಧ್ಯಾಪಕ Academic Level – 13A | ಪ್ರಾಧ್ಯಾಪಕ Academic Level 14 | 23-01-2025 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ ಜಿಲ್ಲೆ



Scanned with OKEN Scanner

| | | | | |
|---|---|---|---|---|
| 05 | ಡಾ.ನಾಗರಾಜ ಪರಿಸರ<br>ಸಹ್ಯಾದ್ರಿ ವಿಜ್ಞಾನ ಕಾಲೇಜು,<br>ಶಿವಮೊಗ್ಗ. | ಸಹ ಪ್ರಾಧ್ಯಾಪಕ<br>Academic<br>Level – 13A | ಪ್ರಾಧ್ಯಾಪಕ<br>Academic<br>Level 14 | 06-11-2025 |
| 06 | ಡಾ.ಪವಿತ್ರ ಜಿ ಎಂ<br>ಸಹ್ಯಾದ್ರಿ ವಿಜ್ಞಾನ ಕಾಲೇಜು,<br>ಶಿವಮೊಗ್ಗ. | ಸಹಾಯಕ<br>ಪ್ರಾಧ್ಯಾಪಕ<br>Academic<br>Level – 11 | ಸಹಾಯಕ<br>ಪ್ರಾಧ್ಯಾಪಕ<br>Academic<br>Level 12 | 20-03-2026 |
| 07 | ಡಾ.ಶಂಭುಲಿಂಗಮೂರ್ತಿ ಹೆಚ್ ಎಂ<br>ಸಹ್ಯಾದ್ರಿ ಕಲಾ ಕಾಲೇಜು,<br>ಶಿವಮೊಗ್ಗ. | ಸಹ ಪ್ರಾಧ್ಯಾಪಕ<br>Academic<br>Level – 13A | ಪ್ರಾಧ್ಯಾಪಕ<br>Academic<br>Level 14 | 16-02-2023 |
| 08 | ಡಾ.ಎಂ ಇಬ್ರಾಹಿಂ ಖಲೀಲುಲ್ಲಾ<br>ಸಹ್ಯಾದ್ರಿ ವಿಜ್ಞಾನ ಕಾಲೇಜು,<br>ಶಿವಮೊಗ್ಗ. | ಸಹ ಪ್ರಾಧ್ಯಾಪಕ<br>Academic<br>Level – 13A | ಪ್ರಾಧ್ಯಾಪಕ<br>Academic<br>Level 14 | 23-01-2025 |
| 09 | ಡಾ.ಶಿವಾನಂದಸ್ವಾಮಿ ಕೆ ಆರ್<br>ಸಹ್ಯಾದ್ರಿ ಕಲಾ ಕಾಲೇಜು,<br>ಶಿವಮೊಗ್ಗ. | ಸಹಾಯಕ<br>ಪ್ರಾಧ್ಯಾಪಕ<br>Academic<br>Level – 12 | ಸಹ ಪ್ರಾಧ್ಯಾಪಕ<br>Academic<br>Level 13A | **Not Promoted**<br><br>1.Dr.Shivananda swamy`s interview performance was far below standard.<br><br>2. The board pointed out to a serious ethical violation, in that the candidate has falsely claimed to have published a paper in a reputed journal. This is found to be not the case & the candidate could not even describe the paper he claimed to have written. |
| 10 | ಡಾ.ಮಂಜುನಾಥ್ ಹೆಚ್ ಪಿ<br>ಸಹ್ಯಾದ್ರಿ ಕಲಾ ಕಾಲೇಜು,<br>ಶಿವಮೊಗ್ಗ. | ಸಹ ಪ್ರಾಧ್ಯಾಪಕ<br>Academic<br>Level – 13A | ಪ್ರಾಧ್ಯಾಪಕ<br>Academic<br>Level 14 | 04-02-2026 |
| 11 | ಡಾ.ಶ್ರೀಧರ್ ಎಸ್<br>ಗ್ರಂಥಾಲಯ | ಸಹಾಯಕ<br>ಗ್ರಂಥಪಾಲಕರು<br>Academic<br>Level – 10 | ಸಹಾಯಕ<br>ಗ್ರಂಥಪಾಲಕರು<br>Academic<br>Level 11 | 14-01-2023 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

**2026–ಸಿಂ–5.20:** ಶ್ರೀ ಮೋಹನ್ ಕುಮಾರ್ ಬಿ.ಎಂ. ವಕೀಲರು, ಬೆಂಗಳೂರು ಇವರನ್ನು ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ ಸೇರ್ಪಡಿಸುವ ಕುರಿತು.

**ನಿರ್ಣಯ:** ಶ್ರೀ ಮೋಹನ್ ಕುಮಾರ್ ಬಿ.ಎಂ. ವಕೀಲರು, ಬೆಂಗಳೂರು ಇವರನ್ನು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ ಸೇರ್ಪಡೆಗೊಳಿಸಿ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2026–ಸಿಂ–5.21:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರನ್ನು ನೇಮಿಸುವ ಕುರಿತು.

**ಚರ್ಚೆ:** ವಿಷಯ ಮಂಡಿಸಿದ ಕುಲಸಚಿವರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ ಮಹಿಳಾ ವೈದ್ಯರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಆರು ತಿಂಗಳ ಅವಧಿಗೆ ಮಹಿಳಾ ವೈದ್ಯರ ಸೇವೆಯನ್ನು ಪಡೆಯಬೇಕಾಗಿರುತ್ತದೆ.

ಕುವೆಂಪು ವಿಶ್ವವಿದ್ಯಾಲಯಕ್ಕೆ ಒಂದು ವೈದ್ಯಾಧಿಕಾರಿ ಹುದ್ದೆಯು ಸರ್ಕಾರದಿಂದ ಮಂಜೂರು ಆಗಿರುತ್ತದೆ. ಸದರಿ ಹುದ್ದೆಯು ಹಲವು ವರ್ಷಗಳಿಂದ ಖಾಲಿ ಇದ್ದು, ಈ ಸಂಬಂಧ ಸರ್ಕಾರಿ ವೈದ್ಯಾಧಿಕಾರಿಯನ್ನು ನಿಯೋಜಿಸುವಂತೆ ಕೋರಿ, ಸರ್ಕಾರಕ್ಕೆ ಮನವಿ ಮಾಡಲಾಗಿರುತ್ತದೆ. ಆದರೆ, ಇದುವರೆಗೂ ಸರ್ಕಾರದಿಂದ ವೈದ್ಯಾಧಿಕಾರಿಯನ್ನು ನಿಯೋಜಿಸಿರುವುದಿಲ್ಲ. ಆರೋಗ್ಯ ಕೇಂದ್ರದಲ್ಲಿ ಈಗಾಗಲೇ ಒಬ್ಬ ವೈದ್ಯಾಧಿಕಾರಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ವೈದ್ಯಾಧಿಕಾರಿಯ ನೇಮಕಾತಿಯನ್ನು ಯಾವುದೇ ಪ್ರಕಟಣೆ ಹೊರಡಿಸಿ, ನೇಮಕಾತಿ ಮಾಡಿಕೊಂಡಿರುವುದಿಲ್ಲ. ಪ್ರಸ್ತುತ ಸದರಿ ವೈದ್ಯಾಧಿಕಾರಿಯವರಿಗೆ ಮಾಹೆಯಾನೆ ರೂ.70,000/– (ರೂಪಾಯಿ ಎಪ್ಪತ್ತು ಸಾವಿರ ಮಾತ್ರ) ಗಳನ್ನು ವೇತನವಾಗಿ ಪಾವತಿಸಲಾಗುತ್ತಿದೆ.

ಮಹಿಳಾ ವೈದ್ಯಾಧಿಕಾರಿ ಹುದ್ದೆಗೆ ಪ್ರಸ್ತುತ ಡಾ.ಸುಷ್ಮಾ – ಇವರು BAMS, ಡಾ. ಬೆಳಗುಶ್ರೀ– ಇವರು BHMS ಡಾ. ಅನುಶ್ರೀ ಎಂ– ಇವರು MBBS ವಿದ್ಯಾರ್ಹತೆ ಹೊಂದಿರುವ ಒಟ್ಟು 03 ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ವಿದ್ಯಾರ್ಥಿನಿಯರ ಆರೋಗ್ಯದ ಸಮಸ್ಯೆಗಳನ್ನು ಪರಿಶೀಲಿಸಲು ಒಬ್ಬ ಮಹಿಳಾ ವೈದ್ಯಾಧಿಕಾರಿಯ ಸೇವೆಯು ಅಗತ್ಯವಿದ್ದು, ಮೇಲ್ಕಂಡ ಮೂರು (03) ಅಭ್ಯರ್ಥಿಗಳಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಕುರಿತಂತೆ ಹಾಗೂ ಸಂಭಾವನೆಯನ್ನು ನಿಗದಿಪಡಿಸುವ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿದೆ ಎಂದರು.

ಆರೋಗ್ಯ ಕೇಂದ್ರಕ್ಕೆ ತುರ್ತು ಇರುವ ಔಷಧಗಳನ್ನು ಜನೌಷಧ ಕೇಂದ್ರದಿಂದ ಖರೀದಿಸಲು ಅಗತ್ಯ ಕ್ರಮಕೈಗೊಂಡಿರುವ ಅಂಶವನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಎಂ.ಬಿ.ಬಿ.ಎಸ್ ವಿದ್ಯಾರ್ಹತೆಯುಳ್ಳ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕಾತಿ ಮಾಡುವ ಕುರಿತು ಪತ್ರಿಕಾ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಆಯ್ಕೆ ಪ್ರಕ್ರಿಯೆ ನಂತರ ಸೂಕ್ತ ಸಂಭಾವನೆಯೊಂದಿಗೆ ನೇಮಕಾತಿ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2026–ಸಿಂ–5.22;** ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಏಜೆನ್ಸಿ ಸಿಬ್ಬಂದಿಗಳನ್ನು ಕಡಿತಗೊಳಿಸುವ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯುತ್ತಿರುವ "ಸಿ" ಮತ್ತು "ಡಿ" ದರ್ಜೆ / ಭದ್ರತಾ / ಸ್ವಚ್ಛತಾ / ತೋಟಗಾರಿಕೆ / ಗ್ಯಾಂಗ್‌ಮನ್ ಸಿಬ್ಬಂದಿಗಳನ್ನು ಕಡಿತಗೊಳಿಸುವ ಕುರಿತಂತೆ ಈಗಾಗಲೇ ದಿನಾಂಕ:10–06–2026 ರಂದು ನಡೆದ ಸಿಂಡಿಕೇಟ್ ಸಭೆಗೆ ವಿವರವಾದ ಮಾಹಿತಿಯೊಂದಿಗೆ ವಿಷಯವನ್ನು ಮಂಡಿಸಲಾಗಿತ್ತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಸದರಿ ವಿಷಯಕ್ಕೆ ಪೂರಕವಾಗಿ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಹೊರಡಿಸಲಾಗಿರುವ ಟೆಂಡರ್ ಅನುಸಾರ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಾಗಿರುವ ಸಿಬ್ಬಂದಿಗಳನ್ನು ಕಡಿತಗೊಳಿಸುವ ಕುರಿತಂತೆ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಲಾಗಿರುವಂತೆ, ಆಡಿಟ್ ಆಕ್ಷೇಪಣೆಯಾಗಿರುವ ಅಂಶದನುಸಾರ ಮತ್ತು ಸರ್ಕಾರದಿಂದ ಹೊರಗುತ್ತಿಗೆ ನೌಕರರುಗಳನ್ನು ಕಡಿತಗೊಳಿಸುವ ಕುರಿತಂತೆ ವಿಶ್ವವಿದ್ಯಾಲಯಕ್ಕೆ ಈಗಾಗಲೇ ಹಲವುಬಾರಿ ನಿರ್ದೇಶನ ಬಂದಿರುತ್ತದೆ.

ಈ ಸಂಬಂಧ ಸಿಬ್ಬಂದಿಗಳನ್ನು ಕಡಿತಗೊಳಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಬಹುದಾಗಿರುತ್ತದೆ.

1. ಹೊರಗುತ್ತಿಗೆ ಪಡೆಯಲು ಹೊರಡಿಸಲಾದ ಟೆಂಡರ್ ಅನುಸಾರ ವಿದ್ಯಾರ್ಹತೆ ಹೊಂದಿಲ್ಲದ ನೌಕರರುಗಳನ್ನು ಸೇವೆಯಿಂದ ಬಿಡುಗಡೆಗೊಳಿಸುವುದು.
2. ವಿಶ್ವವಿದ್ಯಾಲಯದ ಖಾಯಂ ನೌಕರರುಗಳ ಪತಿ / ಪತ್ನಿ / ಸಹೋದರ / ಸಹೋದರಿ / ಕೌಟುಂಬಿಕ ಸದಸ್ಯರುಗಳು ಏಜೆನ್ಸಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಕರಣಗಳನ್ನು ಪರಿಶೀಲಿಸಿ, ಸೇವೆಯಿಂದ ಬಿಡುಗಡೆಗೊಳಿಸುವುದು.
3. ಏಜೆನ್ಸಿ ಮೂಲಕ ಒಂದೇ ಕುಟುಂಬದ ಪತಿ / ಪತ್ನಿ / ಸಹೋದರ / ಸಹೋದರಿ / ಕೌಟುಂಬಿಕ ಸದಸ್ಯರುಗಳು ಏಜೆನ್ಸಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಕರಣಗಳನ್ನು ಪರಿಶೀಲಿಸಿ, ಸೇವೆಯಿಂದ ಬಿಡುಗಡೆಗೊಳಿಸುವುದು.
4. ವಿಶ್ವವಿದ್ಯಾಲಯದ ಖಾಯಂ ನೌಕರರುಗಳಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ನೌಕರರುಗಳ ಪತಿ / ಪತ್ನಿ / ಸಹೋದರ / ಸಹೋದರಿ / ಕೌಟುಂಬಿಕ ಸದಸ್ಯರುಗಳು ಏಜೆನ್ಸಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಕರಣಗಳನ್ನು ಪರಿಶೀಲಿಸಿ, ಸೇವೆಯಿಂದ ಬಿಡುಗಡೆಗೊಳಿಸುವುದು.
5. ಏಜೆನ್ಸಿ ಮೂಲಕ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳಲ್ಲಿ 60 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ನೌಕರರುಗಳನ್ನು ಸೇವೆಯಿಂದ ಬಿಡುಗಡೆಗೊಳಿಸುವುದು.

ಏಜೆನ್ಸಿ ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸುವ ಕುರಿತು ಮೇಲೆ ವಿವರಿಸಲಾದ ಮಾನದಂಡಗಳಿಗನುಸಾರವಾದ ಸಿಬ್ಬಂದಿಗಳ ವಿವರವಾದ ಪಟ್ಟಿಯನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಇವರು ಮಾತನಾಡಿ 60 ವರ್ಷ ವಯೋಮಾನದವರನ್ನು ನಿವೃತ್ತಿಗೊಳಿಸುವ ಬಗ್ಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಉಳಿದ ಸಿಬ್ಬಂದಿಗಳು ಸುಮಾರು 15 ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಕಾರ್ಯನಿರ್ವಹಿಸುತ್ತಿದ್ದು ಅಂತಹ ಸಿಬ್ಬಂದಿಗಳ ಸೇವೆಯನ್ನು ಕಡಿತಗೊಳಿಸಿದಲ್ಲಿ ಅವರ ಜೀವನೋಪಾಯಕ್ಕೆ ತೊಂದರೆಯಾಗುತ್ತದೆ ಎಂದರು. ಸೆಕ್ಯೂರಿಟಿ ಸಿಬ್ಬಂದಿಗಳ ವಿವರವನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಕೋರಿದರು. ಹಾಗೂ 04 ತಿಂಗಳು ಯಥಾ ಸ್ಥಿತಿ ಕಾಪಾಡಲು ಕೋರಿದರು.

ಸದಸ್ಯರಾದ ಶ್ರೀ ಶ್ರೀಪಾಲ್ ಮಾತನಾಡಿ ಇದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಬಹುದೆಂದು ತಿಳಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಹಣಕಾಸು ಅಧಿಕಾರಿಗಳು ಮಾತನಾಡುತ್ತಾ, ಹೊರಗುತ್ತಿಗೆ ಸಿಬ್ಬಂದಿಗಳ ಕಡಿತ ಕುರಿತಂತೆ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚೆಯಾಗಿದೆ. ಸಿಬ್ಬಂದಿಗಳನ್ನು ಕಡಿತಗೊಳಿಸದಿದ್ದಲ್ಲಿ ನಿವೃತ್ತಿಯಾದವರಿಗೆ ಪಿಂಚಣಿ ಅನುದಾನ ನೀಡುವುದಿಲ್ಲವೆಂದು ತಿಳಿಸಿರುತ್ತಾರೆ ಎಂದರು. ಪ್ರಸ್ತುತ 41 ನಿವೃತ್ತಿದಾರರಿಗೆ ನಿವೃತ್ತಿ ಸೌಲಭ್ಯ ನೀಡಬೇಕಾಗಿದೆ ದಾವಣಗೆರೆ ವಿಶ್ವವಿದ್ಯಾಲಯಕ್ಕೆ 07 ಜನ ನಿವೃತ್ತದಾರರಿಗೆ Pension Contribution ಪಾವತಿಸಬೇಕಾಗಿದೆ ಎಂದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಹಲವಾರು ವರ್ಷಗಳ ಸೇವೆಯನ್ನು ಸಲ್ಲಿಸಿ ವಯೋನಿವೃತ್ತಿ ಹೊಂದಿದ ನೌಕರರುಗಳಿಗೆ ಪಿಂಚಣಿ ಸೌಲಭ್ಯವನ್ನು ನೀಡದೇ ಇದ್ದಲ್ಲಿ ಅವರಿಗೆ ಆಗುತ್ತಿರುವ ತೊಂದರೆ ಕುರಿತು ಸಭೆಗೆ ವಿವರಿಸಿ ಹೊರಗುತ್ತಿಗೆ ನೌಕರರ ಕಡಿತ ಮಾಡುವುದು ಆಡಿಟ್/ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಅನಿವಾರ್ಯವೆಂಬುದನ್ನು ತಿಳಿಸಿದರು. ಸದಸ್ಯರಾದ ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ ಅತಿಥಿ ಉಪನ್ಯಾಸಕರಲ್ಲಿ ಎಷ್ಟು ಸಂಖ್ಯೆ ಕಡಿಮೆ ಮಾಡಲಾಗಿದೆ ಅತಿಥಿ ಉಪನ್ಯಾಸಕರನ್ನು ಸಹ ಕೆಲವು ಮಾನದಂಡದ ಮೇಲೆ ಕಡಿಮೆ ಮಾಡಲು ತಿಳಿಸಿದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಏಜೆನ್ಸಿ ಸಿಬ್ಬಂದಿಗಳನ್ನು ಕಡಿತಗೊಳಿಸುವ ಕುರಿತಂತೆ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

1. 60ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯೋಮಾನವರಿದ್ದಲ್ಲಿ ಅಂತಹವರನ್ನು ಸೇವೆಯಿಂದ ಬಿಡುಗಡೆಗೊಳಿಸುವುದು.
2. ವಿಶ್ವವಿದ್ಯಾಲಯದ ಖಾಯಂ ನೌಕರರುಗಳ ಪತಿ / ಪತ್ನಿ / ಸಹೋದರ / ಸಹೋದರಿ / ಕೌಟುಂಬಿಕ ಸದಸ್ಯರುಗಳು ಏಜೆನ್ಸಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಕರಣಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಸೇವೆಯಿಂದ ಬಿಡುಗಡೆಗೊಳಿಸಲು ಕ್ರಮವಹಿಸುವುದು.
3. ಹೊರಗುತ್ತಿಗೆ ಪಡೆಯಲು ಹೊರಡಿಸಲಾದ ಟೆಂಡರ್ ಅನುಸಾರ ವಿದ್ಯಾರ್ಹತೆ ಹೊಂದಿಲ್ಲದ ನೌಕರರುಗಳು ಎಷ್ಟು ವರ್ಷ ಸೇವೆ ಸಲ್ಲಿಸಿದ್ದಾರೆ ಎಂಬುದನ್ನು ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವುದು.
4. ಸೆಕ್ಯೂರಿಟಿ ಏಜೆನ್ಸಿ ಸಿಬ್ಬಂದಿಗಳ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳುವುದು.

2026–ಸಿಂ–5.22(ಎ): ಶ್ರೀ ಸೀತಾರಾಮ ಎಂ. – ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿರುವ ಕುರಿತಂತೆ ರಿಟ್ ಪಿಟಿಷನ್ ನಂ.9759/2021ರ ಅನುಸಾರ ಕ್ರಮ ಜರುಗಿಸುವ ಕುರಿತು.

ಚರ್ಚೆ: ವಿಷಯ ಮಂಡಿಸಿದ ಕುಲಸಚಿವರು ಪ್ರಕರಣದ ಕುರಿತು ಸಂಕ್ಷಿಪ್ತವಾಗಿ ವಿವರಿಸಿ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ಮಾಸನಿ–2:115:2021–22 ದಿನಾಂಕ:15–04–2021 ರಲ್ಲಿ ಶ್ರೀ ಸೀತಾರಾಮ ಎಂ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಲಾಗಿತ್ತು. ಪ್ರಸ್ತುತ ಸದರಿ ವಜಾಗೊಳಿಸಿದ ಆದೇಶವನ್ನು ಪ್ರಶ್ನಿಸಿ, ಶ್ರೀ ಸೀತಾರಾಮ ಎಂ. ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದು (ರಿಟ್ ಪಿಟಿಷನ್ ನಂ.9759/2021) ಸದರಿ ಮೊಕದ್ದಮೆಗೆ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿರುತ್ತದೆ.

1) Petition is hereby allowed
2) The Impugned order at Annexure –A dated:15-04-2021 paased by the 1st respondent – Vice Chancellor of Kuvempu University is hereby quashed.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಪ್ರಸ್ತುತ ಶ್ರೀ ಸೀತಾರಾಮ ಎಂ. – ಇವರು ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿದ ದಿನಾಂಕ:15-04-2021ರ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಗೆ ದಿನಾಂಕ:01-06-2026 ರಂದು ಆದೇಶ ಹೊರಡಿಸಿದ್ದನ್ನು ಲಗತ್ತಿಸಿ, ನಿವೃತ್ತಿ ವೇತನ ಸೌಲಭ್ಯಗಳು ಹಾಗೂ ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಶ್ರೀ ಸೀತಾರಾಂ ಎಂ. ಇವರಿಗೆ ನೀಡಿರುವ ಪರಿಶಿಷ್ಟ ಪಂಗಡ "ಮಾಲೇರು" (Maleru) ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಜಿಲ್ಲಾಧಿಕಾರಿಗಳು, ಉಡುಪಿ ಮತ್ತು ಅಧ್ಯಕ್ಷರು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ, ಉಡುಪಿ– ಇವರು ಆದೇಶ ಸಂಖ್ಯೆ ಉನಿಸಇ:ಎಸ್-4:ಸಿಆರ್-ಜಾಪ2019-20,ದಿನಾಂಕ:30-03-2021 ರಲ್ಲಿ ಆದೇಶಿಸಿರುತ್ತಾರೆ.

ಮಾನ್ಯ ಜಿಲ್ಲಾಧಿಕಾರಿಗಳು ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಆದೇಶಿಸಿರುವ ಮೇರೆಗೆ ಶ್ರೀ ಸೀತಾರಾಮ ಎಂ. ಇವರನ್ನು ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ::ಮಾಸನಿ-2:115:2021-22, ದಿನಾಂಕ:15-04-2021 ರಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿದ್ದು, ಸದರಿ ವಜಾಗೊಳಿಸಿರುವ ಕ್ರಮವನ್ನು ದಿನಾಂಕ: 14-07-2021 ರಂದು ನಡೆದ ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿರುವ ಮೇರಗೆ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ::ಮಾಸನಿ-2: 10195 :2021-22, ದಿನಾಂಕ:28-07-2022 ರಲ್ಲಿ ವಜಾಗೊಳಿಸಿದ ಕ್ರಮವನ್ನು ಸ್ಥಿರೀಕರಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ನೀಡುತ್ತಾ, ಹೈಕೋರ್ಟ್ ಆದೇಶವನ್ನು ಸಭೆಗೆ ವಿವರಿಸುತ್ತಾ, ಸದರಿ ಆದೇಶದಲ್ಲಿ ಶ್ರೀ ಸೀತಾರಾಮ ಎಂ. ಇವರಿಗೆ ನೀಡಿರುವ ಜಾತಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು **'ಅಸಿಂಧು'** ಎಂದು ಘೋಷಿಸಿ ರದ್ದುಪಡಿಸಿರುವುದನ್ನು ಹೈಕೋರ್ಟ್ **'ಸಿಂಧು'** ಎಂದು ಆದೇಶದಲ್ಲಿ ದಾಖಲಿಸಿರುವುದಿಲ್ಲ. ವಿಶ್ವವಿದ್ಯಾಲಯದಿಂದ ಜಾರಿಗೊಳಿಸಲಾದ ವಜಾ ಆದೇಶವನ್ನು ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯದೇ ತರಾತುರಿಯಲ್ಲಿ ಹೊರಡಿಸಿ ನಂತರ ಸಿಂಡಿಕೇಟ್ ಸ್ಥಿರೀಕರಣಕ್ಕೆ ಇಟ್ಟಿರುವ ಕ್ರಮವು ಸರಿಯಲ್ಲವೆಂದು ಹೈಕೋರ್ಟ್ ಹೇಳಿರುತ್ತದೆ. ಆದ್ದರಿಂದ ಈಗ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದ್ದು, ಶ್ರೀ ಸೀತಾರಾಮ ಎಂ. ಇವರು ಸಲ್ಲಿಸಿರುವ ಜಾತಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು'ಅಸಿಂಧು' ಎಂದು ಘೋಷಿಸಿ ರದ್ದುಪಡಿಸಿರುವುದರಿಂದ ಶ್ರೀ ಸೀತಾರಾಮ ಎಂ. ಇವರನ್ನು ಕೆಲಸದಿಂದ ವಜಾಗೊಳಿಸುವ ಬಗ್ಗೆ ಇಂದಿನ ಸಭೆಯ ನಿರ್ಣಯ ಹಾಗೂ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಶ್ರೀಪಾಲ್ ಇವರು ಪ್ರೊ. ಷಣ್ಮುಖ ಇವರ ಪ್ರಕರಣವನ್ನು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ ಶ್ರೀ ಸೀತಾರಾಮ ಎಂ. ಇವರು ಸಲ್ಲಿಸಿರುವ ಜಾತಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು 'ಅಸಿಂಧು' ಎಂದು ಘೋಷಿಸಿ ರದ್ದುಪಡಿಸಿರುವುದರಿಂದ ಶ್ರೀ ಸೀತಾರಾಮ ಎಂ. ಇವರನ್ನು ಕೆಲಸದಿಂದ ವಜಾಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2026–ಸಿಂ–5.22(ಬಿ):** ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಇವರು ಕೆನಡಾ ದೇಶಕ್ಕೆ ತೆರಳಲು ಅನುಮತಿ ನೀಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಶರತ್ ಅನಂತಮೂರ್ತಿ – ಇವರು ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಕೆನಡಾ ದೇಶದಲ್ಲಿರುವ ಕುಟುಂಬ ಸದಸ್ಯರನ್ನು ಭೇಟಿ ಮಾಡುವ ಸಲುವಾಗಿ ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಪಡೆಯದೆ, ತಮ್ಮ ಸ್ವಂತ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಶಿಬಿರನಲ್ಲಿ ದಿನಾಂಕ:17-08-2026 ರಿಂದ ದಿನಾಂಕ:05-09-2026ರವರೆಗೆ 20 ದಿನಗಳ ಅವಧಿಯಲ್ಲಿ (ದಿನಾಂಕ:16-08-2026 ಮತ್ತು 06-09-2026ರ ಸಾರ್ವತ್ರಿಕ ರಜೆ ಬಳಸಿಕೊಂಡು) ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಕೆನಡಾ ದೇಶಕ್ಕೆ ಹೋಗಿಬರಲು ಸಭೆಯು ಸರ್ವಾನುಮತದಿಂದ ಅನುಮತಿಸಿತು.

2026-ಸಿಂ-5.22(ಸಿ): ಉಪಕುಲಸಚಿವ ಹುದ್ದೆಯ ಬಡ್ತಿ ಕುರಿತು.

ಚರ್ಚೆ: ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ಈ ವಿಷಯವು ಹಿಂದಿನ ಸಿಂಡಿಕೇಟ್ ಸಭೆಯಲ್ಲೇ ಚರ್ಚೆಯಾಗಿದೆ. ಪ್ರಸ್ತುತ ಶ್ರೀ ಟಿ.ನಾಗರಾಜ್ ಇವರು ಮನವಿ ಸಲ್ಲಿಸಿ ತಾವು ಪೂರ್ಣಪ್ರಮಾಣದ ಸಹಾಯಕ ಕುಲಸಚಿವ ಹುದ್ದೆಯಲ್ಲಿ ಎರಡು ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ನಿಯಮಾನುಸಾರ ತಮಗೆ ಉಪಕುಲಸಚಿವ ಹುದ್ದೆಗೆ ಬಡ್ತಿಯನ್ನು ನೀಡುವಂತೆ ಕೋರಿರುವುದನ್ನು ಸಭೆಯ ಗಮನಕ್ಕೆ ತಂದು ಹಿಂದಿನ ಸಭೆಯ ನಿರ್ಣಯವನ್ನು ಪುನರ್ ಪರಿಶೀಲಿಸಿ ಬಡ್ತಿಯ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ನಿರ್ಣಯ: ಚರ್ಚೆಯ ನಂತರ ಶ್ರೀ ಟಿ.ನಾಗರಾಜ್ ಇವರಿಗೆ ನಿಯಮಾನುಸಾರ ಅರ್ಹತೆ ಹೊಂದಿದ ದಿನಾಂಕದಿಂದ ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡಲು ಹಾಗೂ ಈಗಾಗಲೇ ಉಪಕುಲಸಚಿವ ಹುದ್ದೆಗೆ ಬಡ್ತಿಯನ್ನು ನೀಡಿರುವ ಶ್ರೀಮತಿ ಸುಶೀಲ ಕೆ. ಇವರ ಬಡ್ತಿಯನ್ನು ಮರುಪರಿಶೀಲಿಸಿ ನಿಯಮಾನುಸಾರ ಅರ್ಹತೆ ಹೊಂದಿದ ದಿನಾಂಕದಿಂದ ಪರಿಗಣಿಸಿ ಬಡ್ತಿ ಆದೇಶವನ್ನು ಪರಿಷ್ಕರಿಸಲು ನಿರ್ಣಯಿಸಲಾಯಿತು ಹಾಗೂ ಸದರಿಯವರು ಈಗಾಗಲೇ ಉಪಕುಲಸಚಿವ ಹುದ್ದೆಯಲ್ಲಿ ಪಡೆದಿರುವ ವೇತನದ ವಸೂಲಾತಿಯ ಬಗ್ಗೆ ಹಣಕಾಸು ಅಧಿಕಾರಿಗಳು ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

2026-ಸಿಂ-5.22(ಡಿ): 04 ಜನ ಹಂಗಾಮಿ ವಾಹನ ಚಾಲಕರುಗಳ ವೇತನ ಪಾವತಿ ಕುರಿತು.

ಚರ್ಚೆ: ವಿಷಯ ಮಂಡಿಸಿದ ಕುಲಸಚಿವರು ವಿಶ್ವವಿದ್ಯಾಲಯದ 04 ಜನ ಹಂಗಾಮಿ ವಾಹನ ಚಾಲಕರುಗಳು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ವಾಹನ ಚಾಲಕರುಗಳಿಗೆ ವೇತನ ಪಾವತಿ ಸಂಬಂಧ ಈ ಕೆಳಕಂಡ ಅಂಶಗಳನ್ನು ಸಭೆಯ ಅವಗಾಹನೆಗೆ ತರಲಾಗಿದೆ.

1) ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಮೂಲಕ ಕಾರ್ಯ ನಿರ್ವಹಿಸುತ್ತಿದ್ದ 05 ಜನ ಏಜೆನ್ಸಿ ವಾಹನ ಚಾಲಕರುಗಳಲ್ಲಿ ಕನಿಷ್ಠ ನಾಲ್ಕು ವರ್ಷಗಳಿಗೂ ಹೆಚ್ಚಿನ ಅವಧಿಯ ಸೇವಾ ಅನುಭವವುಳ್ಳ 04 ಜನ ವಾಹನ ಚಾಲಕರುಗಳಿಗೆ ಖಾಯಂ ವಾಹನ ಚಾಲಕರ ಮೂಲ ವೇತನ ರೂ.11600/-ಗಳಲ್ಲಿ ರೂ.10/-ಗಳನ್ನು ಕಡತಗೊಳಿಸಿ ಸಂಚಿತ ವೇತನದಲ್ಲಿ, ಹಂಗಾಮಿಯಾಗಿ ತಾತ್ಕಾಲಿಕ ಆಧಾರದ ಮೇಲೆ ಆದೇಶ ದಿನಾಂಕದಿಂದ 06 ತಿಂಗಳು ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲು ಘಟಿಸುತ್ತದೇಯೋ ಅಲ್ಲಿಯವರೆಗೆ ವಾಹನ ಚಾಲಕರಾಗಿ ನೇಮಕ ಮಾಡಲಾಗಿತ್ತು. ಸದರಿ ನೇಮಕಾತಿಯು ಶುದ್ಧಾಂಗ ತಾತ್ಕಾಲಿಕವಾಗಿದ್ದು, ವಿಶ್ವವಿದ್ಯಾಲಯದ ಸೇವೆಗೆ ಯಾವುದೇ ಸಮಯದಲ್ಲೂ ಸಿದ್ಧನಿರುತ್ತೇನೆ ಹಾಗೂ ಇದನ್ನು ಪಾಲಿಸಲು ವಿಫಲವಾದಲ್ಲಿ ಮತ್ತು ಇತರೆ ಕಾರಣಗಳಿಂದಾಗಿ ಯಾವುದೇ ಮುನ್ಸೂಚನೆ ನೀಡದೆ ಸೇವೆಯಿಂದ ರದ್ದುಪಡಿಸಿ ವಾಹನ ಚಾಲಕರ ಕೆಲಸದಿಂದ ತೆಗೆದುಹಾಕಬಹುದು ಎಂಬ ಷರತ್ತಿಗೊಳಪಟ್ಟು ಅವರ ನೇಮಕಾತಿಯು ತಾತ್ಕಾಲಿಕ ಎಂದು ಒಪ್ಪಿಕೊಂಡು ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಲಾಗಿರುತ್ತದೆ. ನಂತರ 06 ತಿಂಗಳಿಗೊಮ್ಮೆ ಬಿಡುಗಡೆಗೊಳಿಸಿ, ಒಂದು ದಿನ ಬ್ರೇಕ್ ಡೇ ಎಂದು ಪರಿಗಣಿಸಿ ಸದರಿಯವರುಗಳನ್ನು ಪುನಃ 06 ತಿಂಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತಿತ್ತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

2) 2018–19ನೇ ಸಾಲಿನ ಆಡಿಟ್ ಪ್ಯಾರ 69ರಲ್ಲಿ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಸರ್ಕಾರದಿಂದ ಮಂಜೂರಾತಿ ಪಡೆದು ನೇರ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ ಹಾಗೂ ಇಲ್ಲವಾದಲ್ಲಿ ತಾತ್ಕಾಲಿಕವಾಗಿ ಮಂಜೂರಾದ ಹುದ್ದೆಗಳಿಗೆ ಕನಿಷ್ಠ ಕೂಲಿಯಂತೆ ಹೊರಗುತ್ತಿಗೆಯ ಮೂಲಕ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆದರೆ, ವಿಶ್ವವಿದ್ಯಾಲಯದಲ್ಲಿ ಸರ್ಕಾರದಿಂದ ಹುದ್ದೆಗಳಿಗೆ ಮಂಜೂರಾತಿ ಆದೇಶ ಪಡೆಯದೆ ಸಂಚಿತ ವೇತನ ನಿಧಿಯಲ್ಲಿ ನೇಮಕ ಮಾಡಿಕೊಂಡಿರುವುದು ನಿಯಮಬಾಹಿರವಾಗಿರುತ್ತದೆ. ಸದರಿ ನೌಕರರುಗಳಿಗೆ 2018–19ನೇ ಸಾಲಿನಲ್ಲಿ ರೂ.10,12,972/–ಗಳನ್ನು ವೇತನವಾಗಿ ಪಾವತಿಸಿದ್ದು, ನಿಯಮ ಉಲ್ಲಂಘಿಸಿ ಪಾವತಿಸಿರುವುದನ್ನು ಆಕ್ಷೇಪಣೆಗೊಳಪಡಿಸಿರುತ್ತಾರೆ.

3) 2019–20 ಸಾಲಿನ ಆಡಿಟ್ ಪ್ಯಾರದಲ್ಲಿ 04 ಜನ ವಾಹನ ಚಾಲಕರುಗಳನ್ನು ಹಂಗಾಮಿಯಾಗಿ ನೇಮಿಸಿಕೊಂಡು ವೇತನ ಪಾವತಿಸಿರುವುದು ನಿಯಮಬಾಹಿರವಾಗಿದ್ದು, ರೂ.12,18,456/–ಗಳನ್ನು ಆಕ್ಷೇಪಣೆಯಲ್ಲಿಟ್ಟಿರುತ್ತಾರೆ.

4) 2020–21 ಸಾಲಿನ ಆಡಿಟ್ ಪ್ಯಾರದಲ್ಲಿ 04 ಜನ ವಾಹನ ಚಾಲಕರುಗಳನ್ನು ಹಂಗಾಮಿಯಾಗಿ ನೇಮಿಸಿಕೊಂಡು ವೇತನ ಪಾವತಿಸಿರುವುದು ನಿಯಮಬಾಹಿರವಾಗಿದ್ದು, ರೂ.12,21,044/–ಗಳನ್ನು ಆಕ್ಷೇಪಣೆಯಲ್ಲಿಟ್ಟಿರುತ್ತಾರೆ.

5) 2021–22ನೇ ಸಾಲಿನ ಆಡಿಟ್ ಪ್ಯಾರದಲ್ಲಿ 04 ಜನ ವಾಹನ ಚಾಲಕರುಗಳನ್ನು ಹಂಗಾಮಿಯಾಗಿ ನೇಮಿಸಿಕೊಂಡು ವೇತನ ಪಾವತಿಸಿರುವ ಬಗ್ಗೆ ಆಕ್ಷೇಪಣೆಯಲ್ಲಿಟ್ಟಿರುತ್ತಾರೆ.

6) 04 ಜನ ವಾಹನ ಚಾಲಕರುಗಳನ್ನು ಹಂಗಾಮಿಯಾಗಿ ನೇಮಕಾತಿ ಮಾಡಿಕೊಂಡಾಗಿನಿಂದ ಇಲ್ಲಿಯವರೆಗೆ ಎಲ್ಲಾ ವರ್ಷದ ಆಡಿಟ್ ಪರಿಶೀಲನೆಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುತ್ತಾರೆ.

7) ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ಕಾರ್ಯ ನಿರ್ವಹಿಸುತ್ತಿರುವ ವಾಹನ ಚಾಲಕರುಗಳನ್ನು ವಾಹನ ಚಾಲಕ ಹುದ್ದೆಯಲ್ಲಿ ಸಕ್ರಮಾತಿಗೊಳಿಸುವ ಸಂಬಂಧ "Scheme Governing the Regularization of service of the Drivers working in Kuvempu University on consolidated payments" ಕರಡು ಪರಿನಿಯಮವನ್ನು ರಚಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು, ಆದರೆ, ಸರ್ಕಾರದ ಪತ್ರ ಸಂಖ್ಯೆ: ಇಡಿ 01 ಯುಎಸ್ಎಸ್ 2023 ದಿನಾಂಕ:21–06–2023ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಯಾವುದೇ ನೇಮಕಾತಿಯನ್ನು ನಿಯಮಗಳಲ್ಲಿ ನಿಗದಿಪಡಿಸಿರುವ ವಿಧಿ–ವಿಧಾನಗಳನ್ನು ಅನುಸರಿಸಿ ಸಾರ್ವಜನಿಕವಾಗಿ ಅರ್ಜಿ ಆಹ್ವಾನಿಸಿ, ಅರ್ಹ ಅಭ್ಯರ್ಥಿಯನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಸದರಿ 04 ಜನ ವಾಹನ ಚಾಲಕರುಗಳನ್ನು ಕ್ರಮಬದ್ಧ ಸೇವೆಯಲ್ಲಿ ವಿಲೀನೀಕರಣಗೊಳಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಪರಿನಿಯಮಾವಳಿಯ ಮೂಲ ಪ್ರತಿಯನ್ನು ಅನುಮೋದನೆರಹಿತವಾಗಿ ಹಿಂದಿರುಗಿಸಲಾಗಿರುತ್ತದೆ.

8) ದಿನಾಂಕ: 09–11–2023 ರಂದು ಪ್ರಥಮ ಹಣಕಾಸು ಸಮಿತಿ ಸಭೆಯ ವಿಷಯ ಸಂಖ್ಯೆ:2023–ಹಸ:1:06.5 ವಿಶ್ವವಿದ್ಯಾಲಯದ ವಾಹನ ಚಾಲಕರುಗಳ ವೇತನ ಪಾವತಿಸುವ ಕುರಿತು ನಿರ್ಣಯದಲ್ಲಿ ಸಂಚಿತ / ಹಂಗಾಮಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿಯಮಾವಳಿಯಲ್ಲಿ ಅವಕಾಶವಿಲ್ಲವೆಂದು ಸರ್ಕಾರವು ಈಗಾಗಲೇ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆ ಮತ್ತು ಆದೇಶಗಳಲ್ಲಿ ಸ್ಪಷ್ಟವಾಗಿ ತಿಳಿಸಿ, ಅದರಂತೆ ಕ್ರಮವಹಿಸುವಂತೆ ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಆದಾಗ್ಯೂ ನೇಮಕ ಮಾಡಿಕೊಂಡಿರುವುದು ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ ಎಂದು ಹಾಗೂ ಸದರಿ ಸಭೆಗೆ ಮಂಡಿಸಿರುವ 2019-20ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುವುದನ್ನು ಚರ್ಚಿಸಿ, ಎ.ಜಿ. ಆಡಿಟ್ ವರದಿಯಲ್ಲಿ ಸೆಕ್ಷನ್ (ಬಿ)(08)ರಲ್ಲಿ ಸಹ ಆಕ್ಷೇಪಣೆಯಾಗಿರುವ ಅಂಶವನ್ನು ಸಭೆಯು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಕಾರ್ಯಭಾರದ ಅನುಸಾರ ಏಜೆನ್ಸಿ ಮೂಲಕ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿತ್ತು.

9) ದಿನಾಂಕ:18-01-2024 ರಂದು ನಡೆದ ದ್ವಿತೀಯ ಹಣಕಾಸು ಸಮಿತಿ ಸಭೆಯಲ್ಲಿ ವಿಷಯ ಸಂಖ್ಯೆ:2023-ಹಸ-2:7.2ರಲ್ಲಿ ವಾಹನ ಚಾಲಕರ ವೇತನ ಪಾವತಿಸುವ ಕುರಿತು ನಿರ್ಣಯದಲ್ಲಿ 05 ತಿಂಗಳು ಕರ್ತವ್ಯ ನಿರ್ವಹಿಸಿದ ವೇತನವನ್ನು ಪಾವತಿಸಿ, ವಿಶ್ವವಿದ್ಯಾಲಯದ ಹೊರಗುತ್ತಿಗೆ ಟೆಂಡರ್‌ನಲ್ಲಿ ವಾಹನ ಚಾಲಕರ ಹುದ್ದೆಗಳನ್ನು ಸೇರ್ಪಡೆ ಮಾಡಿಕೊಂಡು ಟೆಂಡರ್ ಕರೆಯುವಂತೆ ಅನುಮೋದಿಸಿರುತ್ತದೆ

10) ದಿನಾಂಕ:16-02-2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ವಿಷಯ ಸಂಖ್ಯೆ:2024-ಸಿಂ-1.05(ಬಿ)ನ ನಿರ್ಣಯದಲ್ಲಿ 04 ಜನ ವಾಹನ ಚಾಲಕರ ಸೇವ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವುದರಿಂದ ದಿನಾಂಕ:27-08-2023 ರಿಂದ ಅನ್ವಯವಾಗುವಂತೆ 11 ತಿಂಗಳುಗಳ ಅವಧಿಗೆ ಪ್ರಸ್ತುತ ಪಡೆಯುತ್ತಿರುವ ಕ್ರೋಢೀಕೃತ ವೇತನದಲ್ಲಿ ಹಂಗಾಮಿ ಸೇವೆಯಲ್ಲಿ ಪುನರ್ ನೇಮಕ ಮಾಡಲು ಸಭೆಯು ನಿರ್ಣಯಿಸಿರುತ್ತದೆ.

11) ರಾಜ್ಯ ಸರ್ಕಾರ ಸುತ್ತೋಲೆ ಸಂಖ್ಯೆ:ಆಇ 02 ಬಿಇಎಂ 2024 ದಿನಾಂಕ:07-06-2024 ರನ್ವಯ ಗ್ರೂಪ್ 'ಡಿ' ಮತ್ತು ಸಮನಾಂತರ ಹುದ್ದೆ ಮತ್ತು 'ಸಿ' ಹುದ್ದೆಗಳ (ಬೆರಳಚ್ಚುಗಾರರು, ದತ್ತಾಂಶ ನಮೂದು ಸಹಾಯಕರು(ಡಿ.ಇ.ಓ), ವಾಹನ ಚಾಲಕರು / ಶೀಘ್ರಲಿಪಿಗಾರರು) ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವುದು ರಾಜ್ಯ ಸರ್ಕಾರದ ನೀತಿಯಾಗಿದೆ. ಆದ್ದರಿಂದ ಅಂತಹ ವೃಂದದ ಹುದ್ದೆಗಳ ಎದುರಾಗಿ ನೇರ ನೇಮಕಾತಿ ಪ್ರಶ್ನೆ ಉದ್ಭವಿಸುವುದಿಲ್ಲ. ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳು ನಿರ್ವಹಣೆ) ನಿಯಮಗಳು 1977ರ ಪ್ರಕಾರ ಈ ವೃಂದಗಳಲ್ಲಿ ಯಾವುದೇ ಖಾಲಿ ಹುದ್ದೆಯನ್ನು ಹೊರಗುತ್ತಿಗೆ ಮೂಲಕವೇ ಭರ್ತಿ ಮಾಡತಕ್ಕದು ಎಂದು ಸರ್ಕಾರವು ಸುತ್ತೋಲೆ ಹೊರಡಿಸಿರುತ್ತದೆ. ಸರ್ಕಾರದ ಸುತ್ತೋಲೆಗಳನ್ವಯ, ಹಣಕಾಸು ಸಮಿತಿಗಳ ನಿರ್ಣಯ ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ಮಾಸನಿ-8:1948: 2024-25 ದಿನಾಂಕ:13/19-08-2024 ರಲ್ಲಿ ಸದರಿ 04 ಜನ ವಾಹನ ಚಾಲಕರುಗಳನ್ನು ರೂ.21390/-ಗಳ ಮಾಸಿಕ ಸಂಭಾವನೆಯೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಆದೇಶ ಹೊರಡಿಸಲಾಗಿರುತ್ತದೆ.

12) ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ಮಾಸನಿ-8:1948:2024-25 ದಿನಾಂಕ:13/19-08-2024ರ ವಿರುದ್ಧ ಸದರಿ 04 ವಾಹನ ಚಾಲಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:24352/2024(S-RES) ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಮಧ್ಯಂತರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಸದರಿ ವಾಹನ ಚಾಲಕರುಗಳಿಗೆ ಮೂಲ ವೇತನ ರೂ. 21,390/- ಗಳನ್ನು ಹಾಗೂ ಸದರಿ ಮೊತ್ತಕ್ಕೆ ಹೆಚ್.ಆರ್.ಎ ಡಿ.ಎ ಮತ್ತು ಎಂ.ಎ ಹಾಗೂ ಇತರೆ ಭತ್ಯೆಗಳನ್ನು ಒಳಗೊಂಡಂತೆ ರೂ. 32,192/-ಗಳನ್ನು ಪಾವತಿಸಲು ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ಮಾಸನಿ-

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

5:2634:2024-25 ದಿನಾಂಕ:14-10-2024 (ಅನುಬಂಧ-13) ಹಾಗೂ ಪರಿಷ್ಕೃತ ಆದೇಶ ಸಂಖ್ಯೆ:ಕುವಿ:ಮಾಸನಿ-5:2761:2024-25 ದಿ:21-10-2024ರಲ್ಲಿ ಆದೇಶಗಳನ್ನು ಹೊರಡಿಸಲಾಗಿದೆ.

13) ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಅನುಸಾರ ವೇತನ ಶ್ರೇಣಿಯನ್ನು ನಿಗದಿಪಡಿಸಿದ ಹಿನ್ನೆಲೆಯಲ್ಲಿ ಸದರಿ ವಾಹನ ಚಾಲಕರುಗಳ ಮನವಿ ಹಾಗೂ ದಿನಾಂಕ: 24-03-2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಅವರುಗಳಿಗೂ ಪರಿಷ್ಕೃತ ವೇತನ ಶ್ರೇಣಿಯನ್ನು ಪಾವತಿಸಲು ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ಮಾಸನಿ-5: 681:2025-26 ದಿನಾಂಕ:26-05-2026 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಆದರೆ, 7ನೇ ವೇತನ ಆಯೋಗದ ಅನುಸಾರ ಹೊರಡಿಸಲಾಗಿರುವ ಪರಿಷ್ಕೃತ ವೇತನ ಶ್ರೇಣಿಯು ಸಂಚಿತ ವೇತನ ಅಥವಾ ಸಂಬಳದ ಆಧಾರದ ಮೇಲೆ ನೇಮಕಗೊಂಡ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಸದರಿ ವೇತನ ಶ್ರೇಣಿಯನ್ನು ಪ್ರಸ್ತುತ ವಾಹನ ಚಾಲಕರುಗಳಿಗೆ ಪಾವತಿಸಲಾಗುತ್ತಿಲ್ಲ.

14) ಆರ್ಥಿಕ ಇಲಾಖೆ ಅಧಿಸೂಚನೆ, ಹಣಕಾಸು ಅಧಿಕಾರಿಗಳ ಸೂಚನೆ ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ವಾಹನ ಚಾಲಕರುಗಳಿಗೆ ಈ ಹಿಂದೆ ಪಾವತಿಸಲಾಗುತ್ತಿದ್ದ 6ನೇ ವೇತನ ಶ್ರೇಣಿಯನ್ವಯ ಮೂಲ ವೇತನ ರೂ.21,390-00 + ಇತರೆ ಭತ್ಯೆಗಳನ್ನೊಳಗೊಂಡಂತೆ ಒಟ್ಟು ರೂ. 31,192/-ಗಳನ್ನು ಪಾವತಿಸಲಾಗುತ್ತಿತ್ತು.

15) ಈಗಾಗಲೇ ನ್ಯಾಯಾಲಯವು ಮಧ್ಯಂತರ ಆದೇಶವು ನೀಡಿ 02 ವರ್ಷಗಳಾಗಿದ್ದು ಆಡಿಟ್ ಆಕ್ಷೇಪಣೆ ಹಾಗೂ ಹಣಕಾಸು ಅಧಿಕಾರಿಗಳ ಆಕ್ಷೇಪಣೆ ಹಿನ್ನೆಲೆಯಲ್ಲಿ ಸದರಿಯವರ ವೇತನಕ್ಕೆ ಹೆಚ್.ಆರ್.ಎ., ಡಿ.ಎ ಮತ್ತು ವೈದ್ಯಕೀಯ ಭತ್ಯೆಗಳನ್ನು ಕಡಿತಗೊಳಿಸಿ ಮೂಲ ವೇತನ ರೂ. 21,390/-ಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

16) ಸದರಿ ವಾಹನ ಚಾಲಕರುಗಳನ್ನು ಏಜೆನ್ಸಿ ಮೂಲಕ ನೇಮಕಾತಿ ಮಾಡಿಕೊಂಡಲ್ಲಿ ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಏಜೆನ್ಸಿ ವಾಹನ ಚಾಲಕರಿಗೆ ರೂ. 19,439-82 (ಇ.ಎಸ್.ಐ, ಪಿ.ಎಫ್ ಇತರೆ ಒಳಗೊಂಡಂತೆ)ಗಳನ್ನು ಪಾವತಿಸುತ್ತಿದ್ದು, ದಿನಾಂಕ:22-05-2026 ರಂದ ಕಾರ್ಮಿಕ ಇಲಾಖೆಯಿಂದ ಪರಿಷ್ಕೃತ ವೇತನ ದರ ನಿಗದಿಪಡಿಸಿದ್ದು, ರೂ. 24407.23 + (ಇ.ಎಸ್.ಐ, ಪಿ.ಎಫ್ ಇತರೆ ಒಳಗೊಂಡಂತೆ) ನೀಡಬೇಕಾಗಿರುತ್ತದೆ. ಅದರಂತೆ ಸಂಭಾವನೆಯನ್ನು ನಿಗದಿಪಡಿಸಬೇಕಾಗಿರುತ್ತದೆ.

ಮೇಲ್ಕಂಡ ಎಲ್ಲಾ ವಿವರಗಳನ್ನು ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ 04 ಜನ ಹಂಗಾಮಿ ವಾಹನ ಚಾಲಕರುಗಳಿಗೆ ಪಾವತಿಸಬೇಕಾಗಿರುವ ವೇತನದ ಕುರಿತು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು. ಸದಸ್ಯರಾದ ಶ್ರೀ ಶ್ರೀಪಾಲ್ ಮಾತನಾಡಿ 'ಸಂಚಿತ' ಎಂಬುದನ್ನು ತೆಗೆದು 'ಏಜೆನ್ಸಿ' ಎಂದು ಪರಿಗಣಿಸಿ ಹಾಗೂ ಅವರ ವೇತನವನ್ನು ಹೆಚ್ಚು ಮಾಡುವಂತೆ ಕೋರಿದರು ಹಾಗೂ ಸರ್ಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿ ಖಾಯಂ ನೇಮಕಾತಿಗೆ ಅನುಮತಿ ನೀಡುವಂತೆ ಕೋರುವುದು ಎಂದರು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಅಂತಿಮ ಆದೇಶದವರೆಗೆ ಪ್ರಸ್ತುತದಂತೆ ವೇತನ ಪಾವತಿಸಲು ಹಾಗೂ 'ಸಂಚಿತ ವೇತನ' ಎಂಬುದನ್ನು ತೆಗೆದು ಇವರುಗಳನ್ನು 'ಹೊರಗುತ್ತಿಗೆ' ಆಧಾರದ ಮೇಲೆ ಪರಿಗಣಿಸಲು ನಿರ್ಣಯಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

2026–ಶಿಂ–5.23 ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು

1) ಶ್ರೀ ಶಿವಕುಮಾರ್ ಎಂ.

2) ಶ್ರೀ ಶಿವಕುಮಾರ್ ಡಿ.ಎಸ್

2026–ಶಿಂ–5.23(1): 1) ಶ್ರೀ ಶಿವಕುಮಾರ್ ಎಂ.

ಚರ್ಚೆ: ಕುಲಸಚಿವರು ಮಾತನಾಡಿ ಸದಸ್ಯರಾದ ಶ್ರೀ ಶಿವಕುಮಾರ್ ಎಂ. ಇವರು ಮಂಡಿಸಿರುವ ಪ್ರಸ್ತಾವನೆಗೆ ಸಂಬಂದಿಸಿದಂತೆ ಸಂಬಂಧಪಟ್ಟ ವಿಭಾಗದಿಂದ ಮಾಹಿತಿಯನ್ನು ಪಡೆದು ತಮಗೆ ಕಳುಹಿಸಿಕೊಡಲಾಗಿದೆ ಅದರ ಪ್ರತಿಯನ್ನು ಸಭೆಗೆ ಮಂಡಿಸಿದ್ದು ಈ ಬಗ್ಗೆ ಏನಾದರೂ ಪ್ರಶ್ನೆಗಳಿದ್ದಲ್ಲಿ ಪ್ರಸ್ತಾಪಿಸುವಂತೆ ತಿಳಿಸಿದರು.

ಸದಸ್ಯರಾದ ಶ್ರೀ ಶಿವಕುಮಾರ್ ಎಂ. ಇವರು ಮಾತನಾಡಿ 12 ದಿನಗೂಲಿ ನೌಕರರುಗಳನ್ನು ವಿಲೀನೀಕರಣಗೊಳಿಸಿರುವ ಕುರಿತಂತೆ ರಾಜ್ಯಪಾಲರ ಆದೇಶದ ಮೇರೆಗೆ ಸರ್ಕಾರವೇ ರದ್ದುಪಡಿಸಿದ್ದರೂ ಸಹ ಇವರುಗಳನ್ನು ಸೇವೆಯಲ್ಲಿ ಮುಂದುವರೆಸಲಾಗಿದೆ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ದಾಖಲೆಗಳನ್ನು ಪರಿಶೀಲಿಸಲಾಗಿ ವಿಲೀನೀಕರಣ ಪ್ರಕರಣ ಕುರಿತಂತೆ ಭಾರತದ ಸರ್ವೋಚ್ಚ ನ್ಯಾಯಾಲಯದ ಉಮಾದೇವಿ ಮತ್ತು ಇತರರ ಪ್ರಕರಣದ ತೀರ್ಪಿನ ಅಂಶ ಮತ್ತು ತೀರ್ಪಿನ ಮೇಲೆ ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ದಿನಾಂಕ:25–05–2006 ರಂದು ಹೊರಡಿಸಿರುವ ಸುತ್ತೋಲೆಯನ್ನು ಸಭೆಗೆ ವಿವರಿಸಿ ಇದರಲ್ಲಿ ಈಗಾಗಲೇ ಸಕ್ರಮಾತಿ ಮಾಡಲಾದ ಪ್ರಕರಣಗಳು ಮತ್ತು ಸದ್ಯ ನ್ಯಾಯಾಲಯಗಳ ಪರಿಶೀಲನೆಯಲ್ಲಿಲ್ಲದ ಪ್ರಕರಣಗಳನ್ನು ಈ ತೀರ್ಪಿನ ಹಿನ್ನೆಲೆಯಲ್ಲಿ ಪುನರ್ ಪರಿಶೀಲನೆಗೆ ಒಳಪಡಿಸುವ ಅಗತ್ಯವಿಲ್ಲವೆಂದು ಸ್ಪಷ್ಟೀಕರಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ನಂತರ ಕೆಲವು ಸದಸ್ಯರುಗಳು ಸರ್ಕಾರವೇ ಆದೇಶ ಹೊರಡಿಸಿರುವುದರಿಂದ ಈ ಪ್ರಕರಣವನ್ನು ಪುನರ್ ಪರಿಶೀಲಿಸುವುದು ಸಾಧುವಲ್ಲವೆಂದರು.

ಶ್ರೀ ಶಿವಕುಮಾರ್ ಎಂ. ಇವರು ಸದಸ್ಯರ ಪ್ರಸ್ತಾವನೆಯೊಂದಿಗೆ ವಿಶ್ವವಿದ್ಯಾಲಯದಿಂದ ನೀಡಿರುವ ದಾಖಲೆಗಳನ್ನು ಸಭೆಯ ಗಮನಕ್ಕೆ ತಂದರು. ಅನರ್ಹ ನೌಕರರು ಹೆಚ್.ಆರ್.ಎಂ. ವಿಭಾಗದಲಿಯೇ ಇರುವುದರಿಂದ ಅವರನ್ನು ತಕ್ಷಣವೇ ಅಲ್ಲಿಂದ ವರ್ಗಾಯಿಸಲು ಒತ್ತಾಯಿಸಿದರು. ಇದಕ್ಕೆ ಸದಸ್ಯರಾದ ಪ್ರೊ. ಸಾಕಮ್ಮ ಬಿ. ರವರು ಧ್ವನಿಗೂಡಿಸಿದರು. ಅನರ್ಹ ನೇಮಕಾತಿಗೆ ಸಂಬಂಧಿಸಿದಂತೆ ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ಜರುಗಿಸಲು ಕೋರಿದರು.

ಮಾನ್ಯ ಕುಲಸಚಿವರು ಮಾತನಾಡುತ್ತಾ, 12 ಜನ ನೌಕರರಲ್ಲಿ ಹೆಚ್ಚಿನ ಜನರು ಈಗಾಗಲೇ ನಿವೃತ್ತಿಯಾಗಿರುವುದನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.

ನಿರ್ಣಯ: ಚರ್ಚೆಯ ನಂತರ ಸದಸ್ಯರ ಪ್ರಸ್ತಾವನೆಗೆ ವಿಶ್ವವಿದ್ಯಾಲಯವು ಒದಗಿಸಿದ ಮಾಹಿತಿಯನ್ನು ಸಭೆಯು ಒಪ್ಪಿತು ಹಾಗೂ ಶ್ರೀಮತಿ ಸುಮರಾವ್, ಸಹಾಯಕ ಕುಲಸಚಿವರು ಇವರನ್ನು ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗದಿಂದ ಬೇರೆ ವಿಭಾಗಕ್ಕೆ ವರ್ಗಾಯಿಸಲು ನಿರ್ಣಯಿಸಲಾಯಿತು.

2026–ಶಿಂ–5.23(2): 2) ಶ್ರೀ ಶಿವಕುಮಾರ್ ಡಿ.ಎಸ್.

ಚರ್ಚೆ: ಕುಲಸಚಿವರು ಮಾತನಾಡಿ ಸದಸ್ಯರಾದ ಶ್ರೀ ಶಿವಕುಮಾರ್ ಡಿ.ಎಸ್. ಇವರು ಮಂಡಿಸಿರುವ ಪ್ರಸ್ತಾವನೆಗೆ ಸಂಬಂದಿಸಿದಂತೆ ಸಂಬಂಧಪಟ್ಟ ವಿಭಾಗದಿಂದ ಮಾಹಿತಿಯನ್ನು ಪಡೆದು ತಮಗೆ ಕಳುಹಿಸಿಕೊಡಲಾಗಿದೆ ಅದರ ಪ್ರತಿಯನ್ನು ಸಭೆಗೆ ಮಂಡಿಸಿದ್ದು ಈ ಬಗ್ಗೆ ಏನಾದರೂ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಪ್ರಶ್ನೆಗಳಿದ್ದಲ್ಲಿ ಪ್ರಸ್ತಾಪಿಸುವಂತೆ ತಿಳಿಸಿದರು

**1. 2024-25ನೇ ಸಾಲಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ವಸೂಲಾ ಮಾಡಿರುವ ಕ್ರೀಡಾ ಶುಲ್ಕ ಮತ್ತು ವೆಚ್ಚಗಳ ಸಂಪೂರ್ಣ ವಿವರ ಮತ್ತು ಪ್ರತ್ಯೇಕ ಕ್ರೀಡಾ ಖಾತೆ ತೆರೆಯುವುದು.**

ಈ ಕುರಿತು ಮಾತನಾಡಿದ ಹಣಕಾಸು ಅಧಿಕಾರಿಗಳು ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದಂತೆ ಹಣಕಾಸಿಗೆ ಪ್ರತ್ಯೇಕ ಖಾತೆ ತೆರೆಯುವ ಕುರಿತು ಕ್ರೀಡಾ ಸಲಹಾ ಸಮಿತಿ ಸಭೆಯಲ್ಲಿ ಚರ್ಚೆಯಾಗಿದ್ದು ಈ ಬಗ್ಗೆ ಸರ್ಕಾರ ಮತ್ತು ಆಡಿಟ್ ಆಕ್ಷೇಪಣೆ ಆಗಿದ್ದು ಆದಷ್ಟು ಖಾತೆಗಳನ್ನು ಕಡಿಮೆ ಮಾಡಿ ಏಕೀಕೃತ ಖಾತೆ ತೆರೆದು ಹಣಕಾಸು ಕಾರ್ಯ ನಿರ್ವಹಣೆ ಮಾಡಲು ಸೂಚಿಸಿರುವುದರಿಂದ ಹೊಸ ಖಾತೆಯನ್ನು ತೆರೆಯಲು ಅವಕಾಶವಿರುವುದಿಲ್ಲ. ಈಗಿರುವ ದೈಹಿಕ ಶಿಕ್ಷಣ ನಿರ್ದೇಶನಾಲಯದ ಖಾತೆಯಲ್ಲಿಯೇ ನಿರ್ವಹಿಸುವುದು ಸೂಕ್ತವೆಂದರು.

ದೈಹಿಕ ಶಿಕ್ಷಣ ವಿಭಾಗಕ್ಕೆ ಅಗತ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಕ್ರೀಡಾ ಸಲಹಾ ಸಮಿತಿ ಸಭೆ ಕರೆದು ಟೆಂಡರ್ ಮೂಲಕ ಖರೀದಿಸಲು ಕ್ರಮಕೈಗೊಳ್ಳಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು.

ನಿರ್ಣಯ: ಮೇಲಿನ ಚರ್ಚೆಯ ಬಗ್ಗೆ ಕ್ರೀಡಾ ಸಲಹಾ ಸಮಿತಿ ಸಭೆ ಕರೆದು ಚರ್ಚಿಸಿ ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**2. ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಶಿವಮೊಗ್ಗದ ಸಹ್ಯಾದ್ರಿ ಕಲಾ ಮತ್ತು ವಿಜ್ಞಾನ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಪದವಿಗಳ ವಿಭಾಗಗಳನ್ನು ಮುಂದುವರೆಸುವ ಬಗ್ಗೆ.**

ಸಹ್ಯಾದ್ರಿ ಕಾಲೇಜುಗಳ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಕೇಂದ್ರ ಕಛೇರಿಗೆ ಸ್ಥಳಾಂತರಿಸುವ ನಿರ್ಧಾರದ ಬಗ್ಗೆ ಸದಸ್ಯರುಗಳಾದ ಶ್ರೀ ಶಿವಕುಮಾರ್, ಶ್ರೀ ಬಸವರಾಜ್ ಮತ್ತು ಶ್ರೀ ಮುಸಾವೀರ್ ಭಾಷಾರವರು ಆಕ್ಷೇಪಿಸಿ ವಿಶ್ವವಿದ್ಯಾಲಯದ ಈ ನಿರ್ಧಾರದಿಂದ ಅನೇಕ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದು ಎಂದರು.

ಸದಸ್ಯರಾದ ಡಾ. ಪ್ರತಿಭಾ ಕೆ.ಆರ್. ಇವರು ಮಾತನಾಡುತ್ತಾ, ಕಾಲೇಜುಗಳಲ್ಲಿ ನೀಡುವ ಸ್ನಾತಕೋತ್ತರ ಪದವಿ ಬೋಧನೆಯು ವಿಶ್ವವಿದ್ಯಾಲಯದಲ್ಲಿ ನೀಡುವ ಬೋಧನೆಗೆ ಸಮಾನಾಂತರವಾಗಿರುವುದಿಲ್ಲ ಹಾಗೂ ವಿಶ್ವವಿದ್ಯಾಲಯದಲ್ಲಿ ನೀಡುವಂತಹ ಬೋಧನೆಯನ್ನು ಕಾಲೇಜುಗಳಲ್ಲಿ ನೀಡಲು ಸಾಧ್ಯವಿಲ್ಲವೆಂದರು. ಕಾಲೇಜು ಬೋಧನಾ ಮಟ್ಟವೇ ಬೇರೆ ವಿಶ್ವವಿದ್ಯಾಲಯದ ಬೋಧನಾ ಮಟ್ಟವೇ ಬೇರೆ ಎಂದರು.

ಈ ಬಗ್ಗೆ ಮಾತನಾಡಿದ ಮಾನ್ಯ ಕುಲಪತಿಗಳು ಸಹ್ಯಾದ್ರಿ ಕಲಾ ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳನ್ನು ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ವರ್ಗಾಯಿಸುವುದರಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಂತರಶಿಸ್ತೀಯ ವಿಷಯಗಳನ್ನು ವ್ಯಾಸಂಗ ಮಾಡಲು ಹಾಗೂ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಕ್ಯಾಂಪಸ್‌ನಲ್ಲಿರುವ ಸಂಪನ್ಮೂಲ ಹಾಗೂ ಪ್ರಯೋಗಾಲಯಗಳನ್ನು ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆಂದು ಸಭೆಗೆ ತಿಳಿಸಿದರು.

ಚರ್ಚೆಯ ನಂತರ ಸದಸ್ಯರ ಪ್ರಸ್ತಾವನೆಗೆ ವಿಶ್ವವಿದ್ಯಾಲಯವು ಒದಗಿಸಿದ ಮಾಹಿತಿಯನ್ನು ಸಭೆಯು ಒಪ್ಪಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

3. ಹಂಗಾಮಿ ನೌಕರರಾಗಿ 10 ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿರುವ 40 ವಿಲೀನೀಕರಣ ನೌಕರರಿಗೆ ನಿವೃತ್ತಿ ವೇತನ ಸೌಲಭ್ಯ ನೀಡುವ ಸಂಬಂಧಿತ ಆದೇಶ ಸಂಖ್ಯೆ ಕುವಿ:ಮಾಸನಿ-5(143):1801:2025-26 ದಿನಾಂಕ:08-02-2026:1441 ಅನ್ನು ಈವರೆಗೂ ಅನುಷ್ಠಾನಗೊಳಿಸದೇ ಇರುವ ಬಗ್ಗೆ.

ಹಣಕಾಸು ಅಧಿಕಾರಿಗಳು ಮಾತನಾಡುತ್ತಾ ಈ ವಿಷಯದ ಕುರಿತು ಹಣಕಾಸು ಅಭಿಪ್ರಾಯಕ್ಕಾಗಿ ಕಡತ ಬಂದಿತ್ತು ಆದರೆ ಸದರಿ ಆದೇಶ ಹೊರಡಿಸಿರುವ ಮೂಲ ಕಡತ ಅಥವಾ ಆದೇಶ ಒದಗಿಸಿದಲ್ಲಿ ಅಭಿಪ್ರಾಯ ನೀಡುವುದಾಗಿ ತಿಳಿಸಲಾಗಿತ್ತು.

ಕುಲಸಚಿವರು ಮಾತನಾಡಿ ಈ ಕುರಿತು ಪರಿಶೀಲಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.

ನಿರ್ಣಯ: ಈ ವಿಷಯದ ಕುರಿತು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

4. ಡಿಜಿಟಲ್ ಮೌಲ್ಯಮಾಪನದ ಸಾಧಕ-ಬಾಧಕ ಮತ್ತು ವೆಚ್ಚದ ಕೂಲಂಕುಷವಾಗಿ ಚರ್ಚಿಸುವುದು.

ನಿರ್ಣಯ: ಈ ಕುರಿತು ವಿಶ್ವವಿದ್ಯಾಲಯದಿಂದ ರಚಿಸಲಾಗಿರುವ ಸಮಿತಿಯ ವರದಿ ಪಡೆದು ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ - ಯಾವುದು ಇಲ್ಲ**

**2026-ಸಿಂ-5.24: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**1) ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ಇವರು ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರ ಸಂಘದ ಶ್ರೀ ಶ್ರೀನಿವಾಸ್ ಇವರ ವಿಚಾರಣೆ ಪ್ರಕರಣದ ಕಾನೂನು ಶುಲ್ಕವನ್ನು ಹಿಂಪಾವತಿಸಿಕೊಳ್ಳುವ ಕುರಿತು ಈ ಹಿಂದೆಯೇ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು ಆದರೆ ಈ ಬಗ್ಗೆ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದರು. ಕುಲಸಚಿವರು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.**

ನಿರ್ಣಯ: ಶ್ರೀ ಶ್ರೀನಿವಾಸ ಮತ್ತು ಕುವೆಂಪು ವಿಶ್ವವಿದ್ಯಾಲಯದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿಗೆ ವಿಶ್ವವಿದ್ಯಾಲಯವು ಪಾವತಿಸಿರುವ ವಕೀಲರ ಶುಲ್ಕವನ್ನು ಸಂಬಂಧಿಸಿದ ಅಧಿಕಾರಿಗಳಿಂದ ಹಿಂಪಾವತಿ / ವಸೂಲಾತಿ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2) ಸಹ್ಯಾದ್ರಿ ವಿಜ್ಞಾನ ಕಾಲೇಜ್, ಶಿವಮೊಗ್ಗ ಇಲ್ಲಿಯ ಬಿ.ಸಿ.ಎ ಪ್ರವೇಶಾತಿ ಕುರಿತು ಸಭೆಯ ಗಮನಕ್ಕೆ ತಂದರು ಹಾಗೂ ಈ ಬಗ್ಗೆ ಸಮಿತಿ ರಚಿಸಿ ಮೇಲ್ವಿಚಾರಣೆ ಮಾಡುವುದು ಸೂಕ್ತ ಎಂದರು. ಕುಲಸಚಿವರು ಈ ಕುರಿತು ಪರಿಶೀಲಿಸಲಾಗುವುದು ಎಂದರು.**

**3) ಸದಸ್ಯರಾದ ಪ್ರೊ.ಸಾಕಮ್ಮ.ಬಿ ಇವರು ಸಹ್ಯಾದ್ರಿ ಕಾಲೇಜುಗಳ ಪ್ರಾಂಶುಪಾಲರುಗಳನ್ನು ಸರದಿ (Rotation) ಆಧಾರದ ಮೇಲೆ ನೇಮಕ ಮಾಡುವ ಕುರಿತು ಪ್ರಸ್ತಾಪಿಸಿದರು.** ಸದಸ್ಯರಾದ ಪ್ರೊ. ಬಸವರಾಜ್ ಇವರು ಮಾತನಾಡುತ್ತಾ, ಯಾವುದೇ ಹುದ್ದೆಗೆ ಅವಧಿ ನಿರ್ಧಾರವಾಗಿರುತ್ತದೆ ಎಂದು ಮಾತನಾಡುತ್ತಾ, ಇತರೆ ವಿಶ್ವವಿದ್ಯಾಲಯದ ಮಾಹಿತಿಯನ್ನು ಸಹ ಸಭೆಯಲ್ಲಿ ಚರ್ಚಿಸಿ ಪ್ರಭಾರ ವ್ಯವಸ್ಥೆಗೆ Seniority cum Rotation ಮೂಲಕ 03 ವರ್ಷ ನಿಗದಿಪಡಿಸುವುದು ಸೂಕ್ತವೆಂದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡುತ್ತಾ, ಸರದಿಯ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಮೇಲೆ ಪ್ರಾಂಶುಪಾಲರ ವರ್ಗಾವಣೆ ಮಾಡಲು ತಿಳಿಸಿದರು. ಶ್ರೀ ಶಿವಕುಮಾರ್ ಎಂ. ಇವರು ಮಾತನಾಡಿ ಅಧಿಸೂಚನೆ ಹೊರಡಿಸಿ ಪ್ರಾಂಶುಪಾಲರ ಹುದ್ದೆಗೆ ನೇಮಕ ಮಾಡುವಂತೆ ತಿಳಿಸಿದರು. ಶ್ರೀ ಬಸವರಾಜ್ ಇವರು ಕೂಡ ಪ್ರಾಂಶುಪಾಲರ ಹುದ್ದೆಯು ಮಂಜೂರಾದ ಹುದ್ದೆ ಇದ್ದಲ್ಲಿ ನಿಯಮಾನುಸಾರ ನೇಮಕಾತಿ ಮಾಡಲು ತಿಳಿಸಿದರು.

ವಿಶ್ವವಿದ್ಯಾಲಯದ ವೆಬ್‌ಸೈಟ್‌ಅನ್ನು ಅಪ್‌ಡೇಟ್ ಮಾಡುವಂತೆ ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ ಘಟಕ ಹಾಗೂ ನೇರ ಆಡಳಿತದ ಕಾಲೇಜುಗಳ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಹೊಸದಾಗಿ ಸಿದ್ಧಪಡಿಸಿ ಈಗಾಗಲೇ ಪ್ರಾಂಶುಪಾಲರಾಗಿ 03(ಮೂರು) ವರ್ಷಗಳ ಸೇವಾವಧಿಯನ್ನು ಮುಗಿಸಿರುವ ಅಧ್ಯಾಪಕರನ್ನು ಹೊರತುಪಡಿಸಿ, ಉಳಿದ ಅಧ್ಯಾಪಕರುಗಳನ್ನು ಸರದಿ ಹಾಗೂ ಜೇಷ್ಠತೆಯ ಮೇಲೆ ಘಟಕ ಮತ್ತು ನೇರ ಆಡಳಿತದ ಕಾಲೇಜುಗಳಿಗೆ 03(ಮೂರು) ವರ್ಷಗಳ ಅವಧಿಗೆ ಮಾತ್ರ ಪ್ರಾಂಶುಪಾಲರಾಗಿ ನೇಮಕ ಮಾಡಲು ನಿರ್ಣಯಿಸಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು



Scanned with OKEN Scanner